ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 2, ಸಂಚಿಕೆ 11, ಸೆಪ್ಟೆಂಬರ್ 2024
SHRIDEVI ANTARANGA
Monthly Magazine



SHRIDEVI EDUCATION

ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್



ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ಹೆಮ್ಮೆ ಮತ್ತು ಅಭಿಮಾನಪಡಬಹುದಾದ ಸ್ನೇಹಿತರಾಗಿರುವ ಡಾ.ಅಶೋಕ ಗೋಧಿ



ಮಾತೃಶ್ರೀ ಶಿವಗಂಗಮ್ಮ ಜೊತೆ ಡಾ. ಅಶೋಕ ಗೋಧಿ

### ಮನಸ್ಸಿಗೆ ಮುದ ಕೊಡುವ ಸ್ನೇಹಿತರು

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಡಾ.ಜಿ.ಎಸ್.ಶಿವರುದ್ರಪ್ಪ ಅವರದು ಖ್ಯಾತ ಹೆಸರು (1926–2013). 'ಎದೆ ತುಂಬಿ ಹಾಡಿದನು' ಈ ಕವನವನ್ನು ಕೇಳದವರು, ಅದರ ಸುಮಧುರತೆಯನ್ನು ಮೆಚ್ಚದ ಕನ್ನಡಿಗನಿಲ್ಲ. ಅವರಿಗೆ 'ರಾಷ್ಟ್ರಕವಿ' 'ಪಂಪ ಪ್ರಶಸ್ತಿ' 'ಕೇಂದ್ರ ಸಾಹಿತ್ಯ ಅಕಾಡೆಮಿ' 'ರಾಜ್ಯೋತ್ಸವ ಪ್ರಶಸ್ತಿ' ಮೊದಲಾದ ಅತ್ಯುನ್ನತ ಸಾಹಿತ್ಯಿಕ ಪ್ರಶಸ್ತಿಗಳು ದೊರಕಿವೆ. ರಾಷ್ಟ್ರಕವಿ ಕುವೆಂಪು ಅವರ ನೇರ ಶಿಷ್ಯರಾದ ಜಿಎಸ್‌ಎಸ್ ತಮ್ಮ ಗುರುಗಳ ವೈಚಾರಿಕತೆಯನ್ನು ಬದುಕಿನಲ್ಲಿ ರೂಢಿಸಿಕೊಂಡವರು. ಕನ್ನಡ ಸಾಹಿತ್ಯಕ್ಕೆ ಅಮೂಲ್ಯವಾದ ಗ್ರಂಥಗಳನ್ನು ಕೊಡುಗೆಯಾಗಿ ಕೊಟ್ಟವರು. ಜಿಎಸ್‌ಎಸ್ 'ಗೆಳೆಯನೊಬ್ಬನಿಗೆ ಬರೆದ ಕಾಗದ' ಎನ್ನುವ ಕವನದಲ್ಲಿ ಸ್ನೇಹದ ಮಹತ್ವವನ್ನು ಅರ್ಥಪೂರ್ಣವಾಗಿ ಸೆರೆ ಹಿಡಿದಿದ್ದಾರೆ. ಶ್ರೀಯುತರ ಕೆಲವು ಸಾಲುಗಳನ್ನು ನೋಡೋಣ!

**ಬಾಳ ಪಯಣದಲ್ಲಿ ಹಿರಿಯ ಗುರಿಯ ಕಡೆ**
**ನಡೆಯುತಿರಲು ನಾನು**
**ಯಾವ ಜನ್ಮದಲ್ಲಿ ಗೈದ ಸುಕೃತವೋ**
**ಮಿಲನವಾದೆ ನೀನು.**
**ತಾಯಿ ಮೊದಲ ಗುರು ತಂದೆ ರಕ್ಷಕನು**
**ಮಿತ್ರ ಎರಡು ಹೌದು**
**ಎಂಬ ಹಿರಿಯ ನುಡಿಯ ನಿನ್ನ ವಾಣಿಯಲಿ**
**ಕೇಳಿ ನಲಿದೆನಿಂದು.**

ಬದುಕಿನಲ್ಲಿ ಒಳ್ಳೆಯ ಪತ್ನಿ, ಗುರುಗಳು, ಮಕ್ಕಳು, ಮಿತ್ರರು ದೊರೆಯುವುದು ಪೂರ್ವಜನ್ಮದ ಸುಕೃತವೆಂದು ಸುಭಾಷಿತವೊಂದು ಹೇಳುತ್ತದೆ.

▶▶ 4ನೇ ಪುಟಕ್ಕೆ...

### ವೈದ್ಯಕೀಯ ಲೋಕದ ಅಚ್ಚರಿ


# ಅಯೋರ್ಟಾರಹಿತವಾಗಿಯೂ ಚಟುವಟಿಕೆಯ ಬದುಕು!



■ ಡಾ. ದೇವಿಪ್ರಸಾದ್ ಶೆಟ್ಟಿ
ನಾರಾಯಣ ಹೃದಯಾಲಯದ ಸೂಪರ್ ಸ್ಪೆಷಾಲಿಟಿ
ಆಸ್ಪತ್ರೆಯ ಸ್ಥಾಪಕರು

ನನ್ನಲ್ಲಿ ಚಿಕಿತ್ಸೆಗೆ ಬರುವ ವ್ಯಕ್ತಿಯೊಬ್ಬರು ಸಾಮಾನ್ಯಕ್ಕಿಂತ ಉದ್ದವಾದ ತೋಳುಗಳು, ಕಾಲುಗಳು ಹಾಗೂ ಬೆರಳುಗಳನ್ನು ಹೊಂದಿದ್ದಾರೆ. ಜೊತೆಗೆ, ಸ್ವಲ್ಪ ಹೆಚ್ಚು ಎನ್ನಬಹುದಾದಷ್ಟು ಎತ್ತರವಾಗಿಯೂ ತೆಳ್ಳಗೂ ಇದ್ದಾರೆ. ಶರೀರದಲ್ಲಿನ ಸಂಯೋಜಕ–ಅಂಗಾಂಶದ (ಕನೆಕ್ಟಿವ್ ಟಿಶ್ಯೂ) ಮೇಲೆ ದುಷ್ಪರಿಣಾಮ ಬೀರುವ ಅಪರೂಪದ ಆನುವಂಶೀಯ ನ್ಯೂನತೆಯಾದ 'ಮಾರ್ಫನ್ ಸಿಂಡ್ರೋಮ್' ಅಸ್ವಸ್ಥತೆಯನ್ನು ಅವರು ಎದುರಿಸುತ್ತಿದ್ದಾರೆ.

ಹೃದಯ ಶಸ್ತ್ರಚಿಕಿತ್ಸಕನಾಗಿ ನನ್ನ 45ಕ್ಕೂ ಹೆಚ್ಚು ವರ್ಷಗಳ ಅನುಭವದಲ್ಲಿ ನಾನು ಈ ಸಿಂಡ್ರೋಮನ್ನು ಎದುರಿಸುತ್ತಿರುವ ಒಂದೇ ಕುಟುಂಬದ ಎರಡು ತಲೆಮಾರುಗಳ ಜನರಿಗೆ ಶಸ್ತ್ರಚಿಕಿತ್ಸೆ ಮಾಡಿದ್ದೇನೆ. ತಂದೆ, ತಾಯಿ ಇಬ್ಬರಿಗೂ ಈ ಅಸ್ವಸ್ಥತೆಯು ಇದ್ದಲ್ಲಿ ಹಲವಾರು ಪೀಳಿಗೆಗಳವರೆಗೆ ಇದು ಮುಂದುವರಿಯಬಹುದಾಗಿರುತ್ತದೆ. ಶರೀರದ ಅತ್ಯಂತ ದೊಡ್ಡ ಅಪಧಮನಿಯಾದ ಮಹಾಧಮನಿಯನ್ನು (ಅಯೋರ್ಟಾವನ್ನು) ಇದು ದುರ್ಬಲಗೊಳಿಸಿ, ಆ ವ್ಯಕ್ತಿಗೆ ಮಾರಣಾಂತಿಕವಾಗಿ ಪರಿಣಮಿಸಬಹುದು.




ಮಹಾಧಮನಿಯು ಒಂದು ಅಡಿಗೂ ಹೆಚ್ಚು ಉದ್ದ ಹಾಗೂ ಗರಿಷ್ಠವೆಂದರೆ ಒಂದು ಇಂಚು ಅಗಲವಿರುವ ರಕ್ತನಾಳ. ಸದಾ ಮಿಡಿಯುತ್ತಾ ಕಾರ್ಯಾಚರಣೆ ಮಾಡುವ ಈ ರಕ್ತನಾಳವು ಹೃದಯದಿಂದ ಆಮ್ಲಜನಕಯುಕ್ತ ರಕ್ತವನ್ನು ಮಿದುಳು, ಹೊಟ್ಟೆ, ಮೂತ್ರಪಿಂಡಗಳು, ಮತ್ತು ಕಾಲುಗಳಿಗೆ ಪೂರೈಸುತ್ತದೆ. ಇದು ಅಧಿಕ ಒತ್ತಡದಲ್ಲಿ ರಕ್ತವನ್ನು ರವಾನಿಸುತ್ತದೆ. ನೋಡಲು ಇದು ಮೂರು ಹಾಳೆಯ ತುಂಡುಗಳನ್ನು ಒಟ್ಟಾಗಿ ಸುತ್ತಲ್ಪಟ್ಟ ಕೊಳವೆಯಂತೆ ಕಾಣುತ್ತದೆ. ಅಂದರೆ, ಮಹಾಧಮನಿಯ ಭಿತ್ತಿಯು ಅಂಗಾಂಶದ ಮೂರು ಪದರಗಳಿಂದ ರೂಪುಗೊಂಡಿರುತ್ತದೆ. ಆದರೆ, ಮಾರ್ಫನ್ ಸಿಂಡ್ರೋಮಿನಿಂದ ಬಾಧಿತರಾಗಿರುವವರಿಗೆ ಈ ಮೂರು ಪದರಗಳನ್ನು ಪರಸ್ಪರವಾಗಿ ಬಂಧಿಸಿರುವ 'ಅಂಟು' ದುರ್ಬಲವಾಗಿರುತ್ತದೆ. ಹೀಗಾದಾಗ, ಮಹಾಧಮನಿಯು ಒತ್ತಡದ ಸನ್ನಿವೇಶಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚೆನಿಸುವಷ್ಟು ಹಿಗ್ಗಿ ರಕ್ತನಾಳದ ಊತಕ್ಕೆ (ಅನ್ಯೂರಿಸಂಗೆ) ಎಡೆಮಾಡಿಕೊಡುತ್ತದೆ. ಮಹಾಧಮನಿಯು ದುರ್ಬಲವಾದಾಗ ಅದು ಒಳಭಾಗದಲ್ಲಿಯೇ ಛಿದ್ರಗೊಳ್ಳಬಹುದು. ಆಗ, ಒಳಭಾಗದಲ್ಲಿ ಹರಿಯಯುತ್ತಿರುವ ರಕ್ತವು ಪದರಗಳ ಮಧ್ಯೆ ಸೋರಿಕೆಯಾಗಿ ಮಹಾಧಮನಿಯನ್ನು ಇನ್ನಷ್ಟು ದುರ್ಬಲವಾಗಿಸುತ್ತದೆ. ಹಠಾತ್ ಸಂಭವಿಸುವ ಹೃದಯಸಂಬಂಧಿ ಸಾವುಗಳಿಗೆ ಇದು ಕೂಡ ಒಂದು ಕಾರಣ ಎಂಬುದು ಗಮನದಲ್ಲಿ ಇಡಬೇಕಾದ ಅಂಶವಾಗಿದೆ.

ನನಗೆ ಗೊತ್ತಿರುವ ಪ್ರಕಾರ, ಪ್ರಪಂಚದಲ್ಲಿ ಮಹಾಧಮನಿ ಇಲ್ಲದೇ ಬದುಕುತ್ತಿರುವವರು ಇಲ್ಲವೇ ಇಲ್ಲ ಎನ್ನಬಹುದು. ಆ ದೃಷ್ಟಿಯಿಂದ ನೋಡಿದಾಗ ನಾನು ಚಿಕಿತ್ಸೆ ನೀಡುತ್ತಿರುವ ಮಾರ್ಫನ್ ಸಿಂಡ್ರೋಮ್‌ನಿಂದ ಬಾಧಿತರಾಗಿಯೂ ಜೀವಂತವಾಗಿರುವ ಈ ವ್ಯಕ್ತಿಯು ವೈದ್ಯಕೀಯ ಲೋಕದಲ್ಲಿನ ಒಂದು ಅಚ್ಚರಿಯಾಗಿದ್ದಾರೆ ಎಂದೇ ಹೇಳಬಹುದು. ಈ ವ್ಯಕ್ತಿಯು ಕಳೆದ 26 ವರ್ಷಗಳಲ್ಲಿ ಐದು ಬಾರಿ ಅಯೋರ್ಟಾದ ಬೇರೆ ಬೇರೆ ಭಾಗಗಳ ಪ್ರಮುಖ ಶಸ್ತ್ರಚಿಕಿತ್ಸೆಗಳಿಗೆ ಒಳಗಾಗಿದ್ದಾರೆ. ಹೃದಯದಿಂದ ಮೇಲ್ಮುಖವಾಗಿ ಸಾಗುವ ಮಹಾಧಮನಿಯ ಮೇಲ್ಭಾಗದಲ್ಲಿ ತಲೆದೋರಿದ 'ಅನ್ಯೂರಿಸಂ' ನಿವಾರಣೆಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಾಗ ಅವರಿನ್ನೂ ಶಾಲಾವಿದ್ಯಾರ್ಥಿಯಾಗಿದ್ದರು. ಅದಾದ ಮೇಲೆ, ಅವರು ಕಾಲೇಜಿನಲ್ಲಿದ್ದಾಗ ಎದೆಯ ಭಾಗದಲ್ಲಿ ಅವರ ಆಯೋರ್ಟಾವನ್ನು ತೆಗೆದುಹಾಕಿ, ಅದರ ಬದಲಿಗೆ ಕೃತಕ ನಾಳವನ್ನು ಜೋಡಿಸಲಾಯಿತು. ಆಗ ನಾನು ಮಣಿಪಾಲ್ ಹಾರ್ಟ್ ಫೌಂಡೇಶನ್ನಿನಲ್ಲಿದ್ದೆ. ನಾನು, ಪ್ರಸ್ತುತ ನಾರಾಯಣ ಹೆಲ್ತ್ ಎಂದು ಈಗ ಹೆಸರಾಗಿರುವ ನಾರಾಯಣ ಹೃದಯಾಲಯದಲ್ಲಿದ್ದೇನೆ. ಆಗ ಅವರು ರಕ್ತವು ಸೋರುತ್ತಿದ್ದ ತಮ್ಮ ಹೃದಯದ ಕವಾಟವನ್ನು ಸರಿಪಡಿಸಿಕೊಳ್ಳಲು ಇಲ್ಲಿಗೆ ಬಂದಿದ್ದರು. ಅನಂತರ, ಮಿದುಳಿನ ಅಪಧಮನಿಗಳು ಹೊರಹೊಮ್ಮುವ ಸ್ಥಳದಲ್ಲಿ ಅಯೋರ್ಟಾದ ಕಮಾನಿನ (ಆರ್ಚ್) ಬದಲಾವಣೆಗಾಗಿ ಮಹತ್ವದ ಶಸ್ತ್ರಚಿಕಿತ್ಸೆಯನ್ನೂ ಅವರು ನನ್ನಿಂದ ಮಾಡಿಸಿಕೊಂಡರು.

ಇಷ್ಟೊಂದು ಶಸ್ತ್ರಚಿಕಿತ್ಸೆಗಳಿಂದಾಗಿ ಅವರ ಜನ್ಮಜಾತ ಅಯೋರ್ಟಾವು ಸಂಪೂರ್ಣವಾಗಿ ಇಲ್ಲವಾಗಿದೆ. ಅಂದರೆ, ಅವರಲ್ಲಿರುವ ಅಯೋರ್ಟಾವು ಈಗ ಪೂರ್ತಿಯಾಗಿ ಕೃತಕವಾದುದು. ಆಶ್ಚರ್ಯವೆಂದರೆ, ಈ ಕೃತಕ ಅಯೋರ್ಟಾದೊಂದಿಗೆ ಅವರು ಪೂರ್ಣಪ್ರಮಾಣದ ಚಟುವಟಿಕೆಯಿಂದ ಕೂಡಿದ ಬದುಕನ್ನು ನಡೆಸುತ್ತಿದ್ದಾರೆ! ಮದುವೆಯಾಗಿರುವ ಅವರಿಗೆ ಮಕ್ಕಳು ಕೂಡ ಇದ್ದಾರೆ. ಅವರ ವೃತ್ತಿಜೀವನ ಕೂಡ ಚೆನ್ನಾಗಿತ್ತು ಎಂಬುದನ್ನು ನಾನು ಅವರಿಂದ ಕೇಳಿ ತಿಳಿದುಕೊಂಡೆ. ಈ ಪ್ರಕರಣವನ್ನು ನೋಡಿದ ಅನಂತರ ಮಾರ್ಫನ್ ಸಿಂಡ್ರೋಮ್‌ನಿಂದ ಬಳಲುತ್ತಿರುವವರು ಉತ್ತಮ ಬದುಕನ್ನು ನಡೆಸಲು ಸಾಧ್ಯವಿದೆ ಎಂಬ ಆಶಾಭಾವನೆ ನನಗೆ ಮೂಡಿದೆ. ಪ್ರಮುಖ ರಕ್ತನಾಳವಾದ ಅಯೋರ್ಟಾ ಇಲ್ಲದೆಯೂ ಚಟುವಟಿಕೆಯಿಂದ ಬದುಕು ಸಾಗಿಸಬಹುದು ಎಂಬುದು ಇದರಿಂದ ಗೊತ್ತಾಗುತ್ತದೆ.

ಮಿದುಳು, ಯಕೃತ್ತು ಹಾಗೂ ಮೂತ್ರಪಿಂಡಗಳು ತಮ್ಮ ಹಲವು ಕಾರ್ಯಾಚರಣೆಗಳನ್ನು ಚತುರತೆಯಿಂದ ನಿರ್ವಹಿಸಿದರೆ ಮಹಾಧಮನಿಯು ಒಂದು ರಕ್ತನಾಳವಾಗಿ ಕಾರ್ಯನಿರ್ವಹಿಸುತ್ತದೆ. ರಕ್ತವನ್ನು ಪೂರೈಸುವ ಪ್ರಮುಖ ಅಪಧಮನಿಯಾಗಿ ಯಾಂತ್ರಿಕವಾಗಿ ಇದು ನಡೆಸುವ ಕಾರ್ಯಾಚರಣೆಗಳಲ್ಲಿ ಬಹುಭಾಗವನ್ನು ಕೃತಕ ರಕ್ತನಾಳವೇ ನಿರ್ವಹಿಸಬಲ್ಲದು. ಅಯೋರ್ಟಾಗೆ ಮೀಸಲಾದ ಈ ಕಾರ್ಯಗಳನ್ನು ದೇಹದ ಇನ್ನಿತರ ಅಂಗಗಳು ಕೂಡ ಸರಿದೂಗಿಸಬಲ್ಲವು. ಹೀಗಾಗಿಯೇ, ಈ ವ್ಯಕ್ತಿಯು ಪ್ರತಿಬಾರಿ ಶಸ್ತ ಚಿಕಿತ್ಸೆಗಾಗಿ ನನ್ನ ಬಳಿಗೆ ಬಂದಾಗಲೂ ಅವರ ದೇಹಪ್ರಕೃತಿಯ ಬಗೆಗೆ ನನಗೆ ನನಗೆ ಒಂದು ಬಗೆಯ ವಿಸ್ಮಯವುಂಟಾಗುತ್ತದೆ. ಈ ಪ್ರಕರಣದಲ್ಲಿನ ವ್ಯಕ್ತಿಯ ದೇಹದ ಒಟ್ಟಾರೆ ಕಾರ್ಯಕ್ಷಮತೆಯು ಮನುಷ್ಯ ಶರೀರದ ಸಂಕೀರ್ಣತೆಯ ಬಗ್ಗೆ ಹೊಸ ದೃಷ್ಟಿಯನ್ನೇ ನಮಗೆ ತಂದುಕೊಡುವಂತಹದ್ದಾಗಿದೆ.

■ ಕನ್ನಡಕ್ಕೆ: ವೆಂಕಟೇಶ ಪ್ರಸಾದ್ ಬಿ.ಎಸ್.

## ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ

# ಬೇಡಿಕೆಯಲ್ಲಿವೆ ಒಂಬತ್ತು ಐ.ಟಿ.ಐ. ತರಬೇತಿ ಕೋರ್ಸ್‌ಗಳು..!

▪ ಕೆ.ಎಸ್. ರಾಜಮನ್ನಾರ್
ಹಿರಿಯ ಪತ್ರಕರ್ತರು

ದೇಶದ ಆರ್ಥಿಕ ಪ್ರಗತಿಗೆ ಕೈಗಾರಿಕಾ ಕ್ಷೇತ್ರದ ಕೊಡುಗೆ ಅಪಾರ. ಹೀಗಾಗಿ ಐಟಿಐ ತರಬೇತಿ ಪಡೆದವರಿಗೆ ಜಗತ್ತಿನೆಲ್ಲೆಡೆ ಉದ್ಯೋಗಾವಕಾಶಗಳು ಲಭಿಸುತ್ತಿವೆ. ಉದ್ಯಮವಲಯದ ಇಂದಿನ ಬೇಕು-ಬೇಡಗಳು ಮತ್ತು ವೃತ್ತಿಕೌಶಲ ರೂಪಿಸಿಕೊಂಡು ಬದುಕು ಕಟ್ಟಿಕೊಳ್ಳಲು ಯುವ ಸಮುದಾಯ ಒಲವು ತೋರುತ್ತಿದೆ. ಇದರಿಂದ ಸಹಜವಾಗಿ ಐಟಿಐ ಕೋರ್ಸ್‌ಗಳಿಗೆ ಮನ್ನಣೆ ದೊರೆಯುತ್ತಿದೆ. ಹೀಗಾಗಿ ಅವುಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ.

1951ರಲ್ಲಿ ಡಿಪಾರ್ಟ್‌ಮೆಂಟ್ ಆಫ್ ಜನರಲ್ ಟ್ರೈನಿಂಗ್ ಆರಂಭವಾಯಿತು. ಅದು ದೇಶದ ಕೈಗಾರಿಕೆಗಳಿಗೆ ಕೌಶಲ್ಯ ಮತ್ತು ವೃತ್ತಿನಿರತ ಮಾನವ ಸಂಪನ್ಮೂಲ ಒದಗಿಸುವ ಉದ್ದೇಶದ ಗುರಿ ಹೊಂದಿದ್ದು, ಕಾಲಾನುಕ್ರಮದ ಅನಂತರ ದೇಶಾದ್ಯಂತ ಕೈಗಾರಿಕಾ ತರಬೇತಿ ಕೇಂದ್ರಗಳ ಆರಂಭಕ್ಕೆ ಮುನ್ನುಡಿಯನ್ನು ಬರೆಯಿತು. ಸದ್ಯದೇಶಾದ್ಯಂತ 15ಸಾವಿರಕ್ಕೂ ಹೆಚ್ಚು ಐಟಿಐ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳ ಪೈಕಿ ಸುಮಾರು 2,300 ಸರ್ಕಾರಿ ತರಬೇತಿ ಸಂಸ್ಥೆಗಳಾಗಿದ್ದರೆ, ಉಳಿದವು ಖಾಸಗಿ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಕರ್ನಾಟಕದಲ್ಲಿ 1,552 ಐಟಿಐ ತರಬೇತಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು ಇದರಲ್ಲಿ 258 ಸರ್ಕಾರಿ ಹಾಗೂ 198 ಅನುದಾನಿತ ಸಂಸ್ಥೆಗಳಾಗಿವೆ. ಉಳಿದವು ಖಾಸಗಿ ಐಟಿಐಗಳಾಗಿವೆ. ರಾಜ್ಯದಲ್ಲಿ ಪ್ರತಿವರ್ಷ ಸುಮಾರು 82 ಸಾವಿರ ವಿದ್ಯಾರ್ಥಿಗಳು ಹಾಗೂ ದೇಶಾದ್ಯಂತ ಪ್ರತಿವರ್ಷ ಹದಿನಾರುಲಕ್ಷ ವಿದ್ಯಾರ್ಥಿಗಳು ಐ.ಟಿ.ಐ. ತರಬೇತಿ ಮುಗಿಸಿ ಉದ್ಯೋಗ-ಮಾರುಕಟ್ಟೆಯನ್ನು ಪ್ರವೇಶಿಸುತ್ತಿದ್ದಾರೆ.

**126 ಬಗೆಯ ಕೋರ್ಸ್‌ಗಳು:**

ಫಿಟ್ಟರ್, ವೆಲ್ಡರ್,ಎಲೆಕ್ಟ್ರಿಷಿಯನ್, ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್, ಟರ್ನರ್, ಏರ್‌ಕಂಡೀಷನರ್ ಸೇರಿದಂತೆ ದೇಶಾದ್ಯಂತ 124 ಬಗೆಯ ಟ್ರೇಡ್‌ಗಳಿವೆ. ಅವುಗಳಲ್ಲಿ 76 ಇಂಜಿನಿಯರಿಂಗ್ ಟ್ರೇಡ್‌ಗಳಿಗೆ ಸಂಬಂಧಪಟ್ಟಿದ್ದರೆ, 48 ಕೋರ್ಸ್‌ಗಳು ನಾನ್‌ಇಂಜಿನಿಯರಿಂಗ್ ಟ್ರೇಡ್‌ಗಳಿವೆ. ನಾನ್‌ಇಂಜಿನಿಯರಿಂಗ್ ಟ್ರೇಡ್‌ನಲ್ಲಿ ಬಹಳ ಮುಖ್ಯವಾಗಿ ಸರ್ವೆ, ಡ್ರಾಯಿಂಗ್, ಕ್ರಾಫ್ಟ್, ಕಾರ್ಪೆಂಟ್ರಿ ಸೇರಿದಂತೆ ಕಸಬುಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ. ಇದರಲ್ಲಿ 9 ಕೋರ್ಸ್‌ಗಳಿಗೆ ಜಾಗತಿಕ ಬೇಡಿಕೆಯಿದೆ. ಇದರ ಜೊತೆಗೆ ಅಂಗವಿಕಲರಿಗಾಗಿಯೇ ಐದು ಪ್ರತ್ಯೇಕ ಕೋರ್ಸ್‌ಗಳಿವೆ.

**ಒಂದು ಹಾಗೂ ಎರಡು ವರ್ಷದ ಕೋರ್ಸ್‌ಗಳು:**

ಐಟಿಐನಲ್ಲಿ ಒಂದು ವರ್ಷ, ಎರಡು ವರ್ಷದ ಕೋರ್ಸ್‌ಗಳಿವೆ. ಜೊತೆಗೆ ಒಂದು ವರ್ಷದ ಅಪ್ರೆಂಟಿಸ್‌ಷಿಪ್ ಸಹ ಇರುತ್ತದೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಗಡೆಯಾದವರು. ಒಂದು ವರ್ಷ ಅಥವಾ ಎರಡು ವರ್ಷದ ಐಟಿಐ ತರಬೇತಿ ಪಡೆಯಬಹುದಾಗಿದೆ. ಈ ಮೊದಲು 10ನೆಯ ತರಗತಿಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೂ ಒಂದು ವರ್ಷದ ಐಟಿಐ ತರಬೇತಿ ಪಡೆಯುವ ಅವಕಾಶವಿತ್ತು. ಆದರೆ ಅದನ್ನು ಈಗ ನಿಲ್ಲಿಸಲಾಗಿದೆ. ಆದರೆ ಅಂತಹ ವಿದ್ಯಾರ್ಥಿಗಳು ಮೂರು ತಿಂಗಳು, ಆರು ತಿಂಗಳು ವೃತ್ತಿ ಆಧಾರಿತ ಕೋರ್ಸುಗಳಿಗೆ ಪ್ರವೇಶ ಪಡೆದು ತಮ್ಮ ಜೀವನ ಕಟ್ಟಿಕೊಳ್ಳುವ ಅವಕಾಶಗಳನ್ನು ಹೊಂದಿರುತ್ತಾರೆ.

ದೇಶಾದ್ಯಂತ ಐ.ಟಿ.ಐ ಕೋರ್ಸ್‌ಗಳಿಗೆ 2013 ರಿಂದ ಜಾರಿಗೆ ಬರುವಂತೆ ಸೆಮಿಸ್ಟರ್ ಪರೀಕ್ಷಾ ವ್ಯವಸ್ಥೆ ಜಾರಿಗೆ ತರಲಾಗಿತ್ತು. ಅದರಂತೆ ಒಂದು ವರ್ಷದ ಐಟಿಐ ವಿದ್ಯಾರ್ಥಿಗಳಿಗೆ ಎರಡು ಸೆಮಿಸ್ಟರ್‌ಗಳು ಹಾಗೂ ಎರಡು ವರ್ಷದ ಐಟಿಐ ವಿದ್ಯಾರ್ಥಿಗಳಿಗೆ ನಾಲ್ಕು ಸೆಮಿಸ್ಟರ್ ಪರೀಕ್ಷೆಗಳಿದ್ದವು. ಆದರೆ 2018ನೇ ಸಾಲಿನಿಂದ ಜಾರಿಗೆ ಬರುವಂತೆ ಐಟಿಐ ವಿದ್ಯಾರ್ಥಿಗಳಿಗೆ ಈ ಮೊದಲು ಜಾರಿಯಲ್ಲಿದ್ದ ವಾರ್ಷಿಕ ಪರೀಕ್ಷಾಪದ್ಧತಿ ಮುಂದುವರಿಸಲಾಗಿದೆ. ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಈ ವರ್ಷದಿಂದ ಆನ್‌ಲೈನ್ ಪರೀಕ್ಷಾ ವ್ಯವಸ್ಥೆ ಜಾರಿಗೊಳಿಸಲಾಗಿದ್ದು, ಜೂನ್‌ನಿಂದ ಆರಂಭವಾಗಲಿರುವ ಐಟಿಐ ಪರೀಕ್ಷೆಗಳು ಆನ್‌ಲೈನ್‌ನಲ್ಲಿಯೇ ನಡೆಯಲಿವೆ.

**ಈ ಕೋರ್ಸ್‌ಗಳಿಗೆ ಭಾರಿ ಬೇಡಿಕೆ:**

**ಒಂದು ವರ್ಷದ ಕೋರ್ಸ್‌ಗಳು:** ಆಟೋ ಎಲೆಕ್ಟ್ರಿಷಿಯನ್, ಕಾರ್ಪೆಂಟರ್, ಮೆಕ್ಯಾನಿಕಲ್ ಡೀಸೆಲ್, ಪ್ಲಂಬರ್, ಶೀಟ್ ಮೆಟಲ್ ವರ್ಕ್, ಫ್ಯಾಬ್ರಿಕೇಟರ್, ಕಂಪ್ಯೂಟರ್ ಹಾರ್ಡ್‌ವೇರ್, ಸ್ಕೂಟರ್ ಅಂಡ್ ಆಟೋ ಮೆಕಾನಿಕ್ ಕೋರ್ಸ್‌ಗಳಿವೆ.

**ಎರಡು ವರ್ಷದ ಕೋರ್ಸ್‌ಗಳು:** ಎಲೆಕ್ಟ್ರಿಕಲ್, ಫಿಟ್ಟರ್, ಎಲೆಕ್ಟ್ರಾನಿಕ್ ಮೆಕಾನಿಕಲ್ ರೆಫ್ರಿಜರೇಟರ್ ಏರ್‌ಕಂಡೀಷನರ್ ವರ್ಕ್, ರೇಡಿಯೋ ಟಿವಿ ಮೈಕಾನಿಕ್ ಕೋರ್ಸ್‌ಗಳು



## ಉದ್ಯೋಗದ ಲಭ್ಯತೆ ಎಲ್ಲಿವೆ?

ಈ ಕೋರ್ಸ್‌ಗಳನ್ನು ಮಾಡಿದವರಿಗೆ ರಕ್ಷಣಾ ಇಲಾಖೆ, ರೈಲ್ವೆ, ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು ಮೆಟ್ರೋ ಕಾರ್ಪೊರೇಷನ್, ಹಿಂದೂಸ್ತಾನ್ ಏರೋನಾಟಿಕಲ್ ಕಾರ್ಖಾನೆ, ಎನ್. ಎ. ಎಲ್. ಹಾಗೂ ಬಿ ಹೆಚ್. ಇ. ಎಲ್, ವಾಹನ ತಯಾರಿಕೆ ಮತ್ತು ವಾಹನಗಳ ಬಿಡಿ ಭಾಗಗಳ ತಯಾರಿಕೆ, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಲಯದ ಕೈಗಾರಿಕೆಗಳಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು ಲಭಿಸಲಿವೆ.

ರಾಜ್ಯದಲ್ಲಿಯೇ ಅತಿ ಹೆಚ್ಚು ಐಟಿಐ ಕೋರ್ಸ್‌ಗಳನ್ನು ಹೊಂದಿರುವ, ವಿದ್ಯಾರ್ಥಿಗಳಿಗೆ ಹೆಚ್ಚು ಆಯ್ಕೆಯ ಅವಕಾಶಗಳಿರುವ ಕಾಲೇಜುಗಳ ಪೈಕಿ ತುಮಕೂರಿನ ಶ್ರೀದೇವಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಮುಖವಾಗಿದೆ. ಇದು ಗುಣಮಟ್ಟದ ಕಲಿಕೆಗೆ ಪೂರಕವಾದ ಕ್ಯಾಂಪಸ್ ಸೌಲಭ್ಯ ಹಾಗೂ ನುರಿತ ಬೋಧಕ ಸಿಬ್ಬಂದಿ ಮತ್ತು ಸುಸಜ್ಜಿತ ಪ್ರಯೋಗಾಲಯಗಳನ್ನು ಒಳಗೊಂಡಿದೆ. ಇಲ್ಲಿ ತರಬೇತಿ ಪಡೆಯುವ, ಪಡೆದಿರುವ ವಿದ್ಯಾರ್ಥಿಗಳಿಗೆ ಕಾಲೇಜಿನವತಿಯಿಂದಲೇ ಪ್ಲೇಸ್‌ಮೆಂಟ್ ಮಾಡಲಾಗುತ್ತಿದೆ. ಜೊತೆಗೆ ಹಾಸ್ಟಲ್ ಸೌಲಭ್ಯವಿದೆ ಎಂದು ಕೈಗಾರಿಕಾ ತರಬೇತಿ ಕೇಂದ್ರದ ಮುಖ್ಯಸ್ಥ ಪುರುಷೋತ್ತಮ್ ಹೇಳಿದ್ದಾರೆ.

ಶ್ರೀದೇವಿ ಕೈಗಾರಿಕಾತರಬೇತಿ ಸಂಸ್ಥೆಯಲ್ಲಿ 2024-25ನೇ ಸಾಲಿಗೆ ಹೊಸ ಕೋರ್ಸ್‌ಗಳನ್ನು ಪರಿಚಯಿಸಲಾಗಿದೆ. ಟರ್ನರ್, ಸರ್ವೆಯರ್, ಕಂಪ್ಯೂಟರ್ ಅಪರೇಟರ್, ಪ್ರೋಗ್ರಾಮಿಂಗ್ ಅಸಿಸ್ಟೆಂಟ್, ಫಿಸಿಯೋಥೆರಪಿ ಟೆಕ್ನೀಷಿಯನ್ ಕೋರ್ಸ್‌ಗಳು ಇಲ್ಲಿಲಭ್ಯವಿದೆ.

ಇವುಗಳಿಗೆ ಬಹಳ ಬೇಡಿಕೆಯೂ ಇದೆ. ಇಲ್ಲಿಂದ ತರಬೇತಿ ಮುಗಿಸಿದ ವಿದ್ಯಾರ್ಥಿಗಳಿಗೆ ರೈಲ್ವೆ, ಡಿಫೆನ್ಸ್, ಹೆಚ್‌ಎಎಲ್, ಬೆಮೆಲ್, ಕೆ ಎಸ್ ಆರ್ ಟಿಸಿ, ಬೆಸ್ಕಾಂ, ನಮ್ಮ ಮೆಟ್ರೋ ಹಾಗೂ ಖಾಸಗಿವಲಯದ ಕೈಗಾರಿಕೆ ಮತ್ತು ನರ್ಸಿಂಗ್ ಹೋಂ ಹಾಗೂ ಆಸ್ಪತ್ರೆಗಳಲ್ಲಿ ಉದ್ಯೋಗ ಅವಕಾಶಗಳು ದೊರೆಯುತ್ತವೆ. ಒಟ್ಟಿನಲ್ಲಿ ಶ್ರೀದೇವಿ ಕಾಲೇಜು ಅವರಣ ಹೊಕ್ಕರೆ ಸಾಕು ಎಂತಹವರಿಗಾದರೂ ಕಲಿತರೆ ಇಲ್ಲಿ ಕಲಿಯಬೇಕು. ಓದಿದರೆ ಇಂತಹ ಕಡೆಯೇ ಓದಬೇಕು ಎಂಬ ತುಡಿತ ಕಾಡುವುದು ಸಹಜ.





**ಪತ್ರಿಕೆಯ ಬಳಗ**

ಸಹಾಯಕ ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು:
**ಎನ್. ಆನಂದ**

ಪುಟ ವಿನ್ಯಾಸ:
**ಸುಮಾ ಸಾಗರ್**

ವೈದ್ಯಕೀಯ ಕ್ಷೇತ್ರದ ವಿಶೇಷ ಲೇಖನ


# ಜಠರದ ಉರಿಯೂತ

## ಅದರ ಕಾರಣ, ಲಕ್ಷಣ ಮತ್ತು ಚಿಕಿತ್ಸೆಗಳು

▪ ಡಾ. ಎಂ.ಎಲ್. ಹರೇಂದ್ರಕುಮಾರ್



ರೋಗಶಾಸ್ತ್ರದ ಪ್ರಾಧ್ಯಾಪಕರು ಮತ್ತು ಶ್ರೀದೇವಿ ವೈದ್ಯಕೀಯ ವಿದ್ಯಾಲಯ ಮತ್ತು ಸಂಶೋಧನ ಆಸ್ಪತ್ರೆಯ ಪ್ರಾಂಶುಪಾಲರು




ಈ ರೋಗದಿಂದ ಜಠರ ಮತ್ತು ಕರುಳಿನ ಒಳಗಿನ ಲೋಳೆಪೊರೆಯಲ್ಲಿ ಉರಿಯೂತ ಉಂಟಾಗುತ್ತದೆ. ಇದರ ಪರಿಣಾಮವಾಗಿ ಜಠರ ಮತ್ತು ಕರುಳಿನಲ್ಲಿ ಹಲವು ಬಗೆಯ ಕ್ಲಿಷ್ಟ ಸಮಸ್ಯೆಗಳು ಉಂಟಾಗುತ್ತವೆ. ಸೂಕ್ತ ಚಿಕಿತ್ಸೆಯಿಂದ ಇದನ್ನು ಗುಣಪಡಿಸಬಹುದಾದರೂ, ಸರಿಯಾದ ಚಿಕಿತ್ಸೆಯನ್ನು ಪಡೆಯದಿದ್ದರೆ, ಅಂತಹ ವ್ಯಕ್ತಿಗಳ ದಿನನಿತ್ಯದ ಜೀವನದ ಮೇಲೆ ತೀವ್ರವಾದ ದುಷ್ಪರಿಣಾಮವನ್ನು ಇದು ಬೀರುತ್ತದೆ. ಆದುದರಿಂದ ಜಠರದ ಉರಿಯೂತದ ಕಾರಣಗಳು, ಅದರ ಲಕ್ಷಣಗಳು, ರೋಗನಿದಾನ ಮತ್ತು ಚಿಕಿತ್ಸೆಗಳ ಬಗೆಗೆ ತಿಳಿದುಕೊಳ್ಳುವುದು, ಈ ರೋಗವನ್ನು ತಡೆಯುವುದಕ್ಕೆ ಅಥವಾ ಇದರಿಂದ ಆಗಬಹುದಾದ ದುಷ್ಪರಿಣಾಮಗಳನ್ನು ಪರಿಣಾಮಕಾರಿಯಾಗಿ ನಿವಾರಿಸುವುದಕ್ಕೆ ಅತ್ಯಗತ್ಯ.

### ಜಠರದ ಉರಿಯೂತದ ಕಾರಣಗಳು:

ಜಠರದ ಉರಿಯೂತಕ್ಕೆ ಹಲವಾರು ಕಾರಣಗಳಿದ್ದು ಅವುಗಳನ್ನು ಸಾಮಾನ್ಯವಾಗಿ ಅವುಗಳ ತೀವ್ರತೆ ಹಾಗೂ ದೀರ್ಘಕಾಲಿಕತೆಯ ಆಧಾರದ ಮೇಲೆ ಎರಡು ವಿಭಾಗಗಳನ್ನಾಗಿ ವಿಂಗಡಿಸಬಹುದು.

### 1. ಜಠರದ ತೀವ್ರ ಉರಿಯೂತ

ಈ ಬಗೆಯ ಉರಿಯೂತವು ಅನಿರೀಕ್ಷಿತವಾಗಿ ಕಾಣಿಸಿಕೊಳ್ಳಬಹುದು ಮತ್ತು ಬಹುತೇಕ ಪ್ರಕರಣಗಳಲ್ಲಿ ಇದು ತಾತ್ಕಾಲಿಕವಾಗಿ ಕಿರಿಕಿರಿಯನ್ನು ಉಂಟುಮಾಡಬಹುದು ಅಥವಾ ಇದರಿಂದ ಜಠರದ ಒಳ ಲೋಳೆಪೊರೆಗೆ ಹಾನಿಯಾಗಬಹುದು.

**ಇದರ ಸಾಮಾನ್ಯ ಕಾರಣಗಳೆಂದರೆ:**

- **ಅತಿಯಾದ ಮದ್ಯಪಾನದ ಚಟ:** ಮದ್ಯಗಳಲ್ಲಿರುವ ಮದ್ಯಸಾರವು ಜಠರದ ಒಳ ಲೋಳೆಪೊರೆಗೆ ಹಾನಿಮಾಡಿ, ಉರಿಯೂತಕ್ಕೆ ಕಾರಣವಾಗಬಹುದು.
- **ಸ್ಟೀರಾಯ್ಡ್‌ರಹಿತವಾದ ಔಷಧಿಗಳು:** ಆಸ್ಪರಿನ್, ಐಬುಪ್ರೊಫೆನ್‌ಗಳಂತಹ ಔಷಧಿಗಳ ಅತಿಯಾದ ಸೇವನೆ ಕೂಡ ಜಠರದ ಒಳ ಲೋಳೆಪೊರೆಗೆ ಧಕ್ಕೆಯನ್ನು ತರಬಹುದು.
- **ಒತ್ತಡಗಳು:** ಶಸ್ತ್ರ ಚಿಕಿತ್ಸೆ, ಗಾಯ ಅಥವಾ ಕೆಲವು ರೋಗಗಳಿಂದಲೂ ಜಠರದ ಉರಿಯೂತವು ಬರಬಹುದು.
- **ಬ್ಯಾಕ್ಟೀರಿಯಾಗಳಿಂದಾಗುವ ಸೋಂಕು:** ಬಹಳಷ್ಟು ಜಠರದ ಉರಿಯೂತದ ಪ್ರಕರಣಗಳಿಗೆ ಹೆಲಿಕೊಬ್ಯಾಕ್ಟರ್ ಪೈಲೊರಿ (ಎಚ್. ಪೈಲೊರಿ) ಎಂಬ ಬ್ಯಾಕ್ಟೀರಿಯಾ ಕಾರಣವಾಗಿರುತ್ತದೆ.

### 2. ಜಠರದ ದೀರ್ಘಕಾಲಿಕವಾದ ಉರಿಯೂತ:

ಈ ಬಗೆಯ ಉರಿಯೂತವು ದೀರ್ಘಕಾಲದಲ್ಲಿ ಹಂತಹಂತವಾಗಿ ವರ್ಧಿಸುತ್ತಾ ಬರುತ್ತದೆ. ಅದರ ಕಾರಣಗಳೆಂದರೆ:

- **ಎಚ್. ಪೈಲೊರಿ ಬ್ಯಾಕ್ಟೀರಿಯಾಗಳಿಂದಾಗುವ ದೀರ್ಘಕಾಲದ ಸೋಂಕು:** ಎಚ್. ಪೈಲೊರಿ ಬ್ಯಾಕ್ಟೀರಿಯಾದ ಸೋಂಕಿಗೆ ಮತ್ತೆ ಮತ್ತೆ ತುತ್ತಾದರೆ, ಅದು ದೀರ್ಘಕಾಲಿಕವಾದ ಜಠರದ ಉರಿಯೂತಕ್ಕೆ ಕಾರಣವಾಗುತ್ತದೆ.
- **ದೇಹದಲ್ಲಿನ ಸ್ವರಕ್ಷಣೆಯ ವಿಧಾನಗಳು:** ಜಠರದ ಉರಿಯೂತದಲ್ಲಿ, ಸ್ವರಕ್ಷಣೆಯ ವ್ಯವಸ್ಥೆಯು ಕ್ರಮತಪ್ಪಿ ಜಠರದ ಒಳಪೊರೆಯ ಮೇಲೆ ತನ್ನ ಪ್ರಕ್ರಿಯೆಯ ಮೂಲಕ ಜಠರದ ದೀರ್ಘಕಾಲದ ಉರಿಯೂತವನ್ನುಂಟು ಮಾಡಬಹುದು.
- **ಅತಿಯಾದ ಮದ್ಯಪಾನದ ಚಟ:** ಅತಿಯಾದ ಮದ್ಯಪಾನದ ಚಟದಿಂದ ದೀರ್ಘಕಾಲದ ಜಠರದ ಉರಿಯೂತವು ಉಂಟಾಗುತ್ತದೆ.
- **ಪಿತ್ತರಸದ ಹಿಮ್ಮುಖ ಸುರಿತ:** ಕೆಲವು ಬಾರಿ, ಪಿತ್ತರಸವು ಸಣ್ಣ ಕರುಳಿನಿಂದ ಹಿಮ್ಮುಖವಾಗಿ ಉದರದೊಳಕ್ಕೆ ಸುರಿಯಲ್ಪಡಬಹುದು. ಇದರಿಂದ ಜಠರದೊಳಗಿನ ಲೋಳೆಪೊರೆಯ ಉರಿಯ ಜೊತೆಗೆ ಊತವೂ ಉಂಟಾಗುತ್ತದೆ.
- **ಸ್ಟೀರಾಯ್ಡ್‌ರಹಿತವಾದ ಔಷಧಿಗಳ ಸತತವಾದ ಸೇವನೆ:** ಸತತವಾಗಿ ಸ್ಟೀರಾಯ್ಡ್ ಔಷಧಿಗಳಾದ ಆಸ್ಪರಿನ್, ಐಬುಪ್ರೊಫೆನ್‌ಗಳಂತಹ ಔಷಧಿಗಳ ಅತಿಯಾದ ಸೇವನೆಯೂ ಜಠರದ ಉರಿಯೂತಕ್ಕೆ ಕಾರಣವಾಗುತ್ತದೆ.

### ಜಠರದ ಉರಿಯೂತದ ಲಕ್ಷಣಗಳು:

ಈ ಉರಿಯೂತದ ತೀವ್ರತೆಯನ್ನು ಅವಲಂಬಿಸಿ ಅದರ ಲಕ್ಷಣಗಳು ಹಲವು ರೀತಿಯಲ್ಲಿರುತ್ತವೆ. ಅವುಗಳೆಂದರೆ:

- **ಉದರದಲ್ಲಿನ ನೋವು:** ಮೇಲ್ಭಾಗದ ಹೊಟ್ಟೆಯಲ್ಲಿ ತೀಕ್ಷ್ಣವಲ್ಲದ ನೋವು ಮತ್ತು ಸ್ವಲ್ಪ ಕಿರಿಕಿರಿ.
- **ಓಕರಿಕೆ ಮತ್ತು ವಾಂತಿ:** ಜಠರದ ಉರಿಯೂತಕ್ಕೆ ಒಳಗಾಗಿರುವ ವ್ಯಕ್ತಿಗಳಿಗೆ ಓಕರಿಕೆಯು ಪದೇಪದೇ ಉಂಟಾಗುತ್ತದೆ ಮತ್ತು ಆಗಾಗ್ಗೆ ವಾಂತಿಯೂ ಆಗುತ್ತದೆ.
- **ಮಂದಪ್ರಕೃತಿಯ ಹಸಿವೆ:** ಹೊಟ್ಟೆಯಲ್ಲಿನ ಅಸೌಖ್ಯದ ಪರಿಣಾಮವಾಗಿ ಆಹಾರಸೇವನೆಯಲ್ಲಿ ನಿರಾಸಕ್ತಿಯುಂಟಾಗಬಹುದು.
- **ಹೊಟ್ಟೆಯುಬ್ಬರ ಮತ್ತು ಅಜೀರ್ಣ:** ಜಠರದ ಉರಿಯೂತದಿಂದ ಹೊಟ್ಟೆಯು ಉಬ್ಬರಿಸಿಕೊಳ್ಳಬಹುದು ಮತ್ತು ಅಜೀರ್ಣವು ಕಾಣಿಸಿಕೊಳ್ಳಬಹುದು.
- **ಹೊಟ್ಟೆಯ ಒಳಗೆ ರಕ್ತಸ್ರಾವ:** ಈ ಉರಿಯೂತವು ತೀವ್ರವಾದರೆ, ಹೊಟ್ಟೆಯ ಒಳಗೆ ರಕ್ತಸ್ರಾವವಾಗುತ್ತದೆ. ಇದರ ಪರಿಣಾಮವಾಗಿ ವಿಸರ್ಜಿತ ಮಲವು ಟಾರ್ ಎಣ್ಣೆ ಬಳಿದಂತೆ ಕಪ್ಪಗೆ ಇರುತ್ತದೆ ಮತ್ತು ವಾಂತಿಯಾದಾಗ ಅದು ಕಾಫಿಪುಡಿಯ ರೀತಿಯಲ್ಲಿ ಕಾಣಿಸುತ್ತದೆ.

### ಜಠರದ ಉರಿಯೂತದ ರೋಗವಿಧಾನ:

ಈ ರೋಗವನ್ನು ಪತ್ತೆಹಚ್ಚಲು ವೈದ್ಯರು ಹಲವು ವಿಧಧ ಪರೀಕ್ಷೆಗಳನ್ನು ನಡೆಸುತ್ತಾರೆ:

1. **ರೋಗಕ್ಕೆ ಸಂಬಂಧಿಸಿದ ರೋಗಿಯ ವೈದ್ಯಕೀಯ ದಾಖಲೆಗಳು ಮತ್ತು ದೈಹಿಕ ಪರೀಕ್ಷೆ:** ರೋಗದ ಹಿಂದಿನ ದಾಖಲೆಗಳನ್ನು ಹಾಗೂ ಆ ವ್ಯಕ್ತಿಯ ದೈಹಿಕ ಪರೀಕ್ಷೆಯನ್ನು ಮಾಡುತ್ತಾರೆ.
2. **ಅಂತರ್ದರ್ಶಕದ ಸಹಾಯದಿಂದ ಉದರಪರೀಕ್ಷೆ (ಎಂಡೋಸ್ಕೋಪಿ):** ಈ ಪರೀಕ್ಷೆಯ ಮೂಲಕ ಹೊಟ್ಟೆಯ ಒಳಗಿನ ಲೋಳೆ ಪದರದ ಪರಿಸ್ಥಿತಿಯನ್ನು ವೀಕ್ಷಿಸಬಹುದು ಮತ್ತು ಅದರಿಂದ ಅಲ್ಲಿ ಉಂಟಾಗಿರುವ ಊತ, ಹುಣ್ಣುಗಳು ಮತ್ತಿತರ ವೈಪರೀತ್ಯಗಳನ್ನು ಅರಿಯಬಹುದು.
3. **ಅಂಗಾಂಶದ ಪರೀಕ್ಷೆ (ಬಯಾಪ್ಸಿ):** ಎಂಡೋಸ್ಕೋಪಿ ಮಾಡುವಾಗ ಪರೀಕ್ಷೆಯ ಉದ್ದೇಶಕ್ಕಾಗಿ ಜಠರದೊಳಗಿನ ಅಂಗಾಂಶಗಳನ್ನು ತೆಗೆದು ಎಚ್. ಪೈಲೊರಿಯ ಸೋಂಕು ಅಥವಾ ಬೇರಾವುದೇ ಸಮಸ್ಯೆಗಳಿವೆಯೇ ಎಂಬುದನ್ನು ಪತ್ತೆಹಚ್ಚಬಹುದು.
4. **ರಕ್ತಪರೀಕ್ಷೆ:** ರಕ್ತಪರೀಕ್ಷೆಯ ಮೂಲಕ ರಕ್ತಹೀನತೆಯನ್ನು, ತನ್ಮೂಲಕ ರಕ್ತಸ್ರಾವವನ್ನೂ ಹಾಗೂ ಎಚ್. ಪೈಲೊರಿಯ ಸೋಂಕಿನ ಇರವನ್ನೂ ಪತ್ತೆಹಚ್ಚಬಹುದು.
5. **ಮಲದ ಪರೀಕ್ಷೆ:** ಇದರಿಂದ ವಿಸರ್ಜಿತ ಮಲದಲ್ಲಿ ರಕ್ತವೂ ವಿಸರ್ಜಿಸಲ್ಪಟ್ಟಿದೆಯೇ, ಎಚ್. ಪೈಲೊರಿಯ ಸೋಂಕು ಇದೆಯೇ ಎಂಬುದನ್ನೂ ಪತ್ತೆಹಚ್ಚಬಹುದು.

### ಚಿಕಿತ್ಸೆ ಮತ್ತು ಆರೈಕೆ

**ಜಠರದ ಉರಿಯೂತದ ಚಿಕಿತ್ಸೆಯು ಈ ರೋಗದ ಕಾರಣ ಹಾಗೂ ಮುಂದಿನ ವಿಷಯಗಳನ್ನು ಅವಲಂಬಿಸಿರುತ್ತದೆ:**

### 1. ಔಷಧೋಪಚಾರ:

- **ಆಂಟಾಸಿಡ್‌ಗಳು ಮತ್ತು ಆಮ್ಲೀಯತೆ ಪ್ರಮಾಣವನ್ನು ತಗ್ಗಿಸುವ ಔಷಧಗಳು:** ಪ್ರೊಟೋನ್ ಪಂಪ್ ಪ್ರತಿಬಂಧಕಗಳು ಮತ್ತು ಎಚ್.2 ರಿಸೆಪ್ಟರ್ ಅಂಟಾಗೊನಿಸ್ಟ್‌ಗಳು ಹೊಟ್ಟೆಯಲ್ಲಿ ಉತ್ಪತ್ತಿಯಾಗುವ ಆಮ್ಲದ ಪ್ರಮಾಣವನ್ನು ಕಡಮೆ ಮಾಡಿ ರೋಗಿಗೆ ಸಮಾಧಾನವನ್ನುಂಟುಮಾಡುತ್ತವೆ.
- **ಪ್ರತಿಜೀವಕಗಳು (ಆಂಟಿಬಯಾಟಿಕ್ಸ್):** ಎಚ್. ಪೈಲೊರಿಯ ಬ್ಯಾಕ್ಟೀರಿಯಾಗಳು ಅಸ್ತಿತ್ವವು ಇದ್ದಲ್ಲಿ, ಅವುಗಳನ್ನು ನಾಶಪಡಿಸಲು ಪ್ರತಿಜೀವಕಗಳನ್ನು ಬಳಸಬೇಕಾಗುತ್ತದೆ.

### 2. ಜೀವನಶೈಲಿಯ ಬದಲಾವಣೆ:

- **ಆಹಾರಸೇವನೆಯಲ್ಲಿ ಬದಲಾವಣೆ:** ಹೊಟ್ಟೆಯ ಉರಿಯನ್ನುಂಟುಮಾಡುವಂತಹ ಆಹಾರಗಳಾದ ಮಸಾಲೆ, ಕೆಫೀನ್ ಮತ್ತು ಮದ್ಯಸಾರ ಇವುಗಳ ಸೇವನೆಯನ್ನು ಬಹಳ ಕಡಮೆ ಮಾಡಬೇಕು, ಒಮ್ಮೆಲೇ ತೆಗೆದುಕೊಳ್ಳುವ ಆಹಾರದ ಪ್ರಮಾಣವನ್ನು ಕಡಮೆ ಮಾಡಬೇಕು ಮತ್ತು ಅದನ್ನು ಆಗಾಗ್ಗೆ ಸೇವಿಸಬೇಕು. ಇದು ಆರೋಗ್ಯವನ್ನು ಸುಧಾರಿಸುವಲ್ಲಿ ಪ್ರಯೋಜನಕಾರಿಯಾಗಿರುತ್ತದೆ.
- **ಸ್ಟಿರಾಯ್ಡ್‌ರಹಿತವಾದ ಔಷಧಿಗಳನ್ನು ವರ್ಜಿಸಬೇಕು:** ಇಂತಹ ಔಷಧಗಳನ್ನು ವರ್ಜಿಸಬೇಕು ಅಥವಾ ಅವುಗಳ ಪ್ರಮಾಣವನ್ನು ಆದಷ್ಟು ತಗ್ಗಿಸಬೇಕು. ಇದರಿಂದ ಹೊಟ್ಟೆಯ ಒಳಪೊರೆಯ ಉರಿಯೂತವನ್ನು ಕಡಮೆಮಾಡಬಹುದು.
- **ಒತ್ತಡದ ನಿರ್ವಹಣೆ:** ದೇಹ ಮತ್ತು ಮನಸ್ಸಿನ ಒತ್ತಡವನ್ನು ಕಳೆಯುವಂತಹ ವ್ಯಾಯಾಮಗಳು, ಧ್ಯಾನ ಅಥವಾ ವೈದ್ಯರ ಸಲಹೆಗಳಿಂದ ಒತ್ತಡದಿಂದ ಉಂಟಾದ ಜಠರದ ಉರಿಯೂತಗಳನ್ನು ಕಡಮೆ ಮಾಡಬಹುದು.

### 3. ಚಿಕಿತ್ಸೆಯ ಅನಂತರ ತೆಗೆದುಕೊಳ್ಳಬೇಕಾದ ಕ್ರಮಗಳು

ಚಿಕಿತ್ಸೆಯ ಅನಂತರವೂ ಕೆಲವು ಕಾಲ ವೈದ್ಯರ ಬಳಿ ಪರೀಕ್ಷೆಗೆ ಒಳಗಾಗಿ ಅವರ ಸಲಹೆಯಂತೆ ನಡೆದುಕೊಳ್ಳಬೇಕು.

### ಉಪಸಂಹಾರ

ಹಲವು ಕಾರಣಗಳಿಂದ ಬರುವ ಜಠರದ ಉರಿಯೂತವು ಒಂದು ಸಾಮಾನ್ಯವಾದ ರೋಗದ ಸ್ಥಿತಿ. ಅದರ ಕಾರಣಗಳನ್ನು ತಿಳಿದುಕೊಳ್ಳುವುದು, ಅದರ ಲಕ್ಷಣಗಳನ್ನು ಗಮನಿಸುವುದು ಮತ್ತು ಸೂಕ್ತ ಸಮಯದಲ್ಲಿಯೇ ಚಿಕಿತ್ಸೆಯನ್ನು ಪಡೆಯುವುದು ಈ ರೋಗದ ನಿರ್ವಹಣೆಯಲ್ಲಿ ಹಾಗೂ ಅದು ವಿಷಮಿಸುವುದನ್ನು ತಡೆಗಟ್ಟುವುದರಲ್ಲಿ ಬಹಳ ಮುಖ್ಯವಾಗಿರುತ್ತವೆ. ತಮ್ಮಲ್ಲಿ ಈ ರೋಗಲಕ್ಷಣಗಳು ಕಂಡುಬಂದ ತಕ್ಷಣ ಈ ರೋಗಪೀಡಿತರು ಅವುಗಳನ್ನು ಗುರುತಿಸಿ ಔಷಧೋಪಚಾರಗಳನ್ನು ಪಡೆದರೆ, ಈ ರೋಗದ ಸಮಸ್ಯೆಯನ್ನು ನಿವಾರಿಸಿಕೊಂಡು ಸುಖೀಜೀವನವನ್ನು ನಡೆಸಬಹುದು.

▪ ಕನ್ನಡಕ್ಕೆ: ವಿ.ಕೃಷ್ಣ

# ಹೆಮ್ಮೆ ಮತ್ತು ಅಭಿಮಾನಪಡಬಹುದಾದ ಸ್ನೇಹಿತರಾಗಿರುವ ಡಾ.ಅಶೋಕ ಗೋಧಿ

▶▶ ಮೊದಲನೇ ಪುಟದಿಂದ

ಈ ಮಾತು ಅಕ್ಷರಸಹ ನಿಜ. ಇವುಗಳಲ್ಲಿ ಯಾವುದೊಂದು ಕೊರತೆಯಾದರೂ ಬದುಕು ಪರಿಪೂರ್ಣವೆನಿಸುವುದಿಲ್ಲ. ಇಂತಹ ಸೌಭಾಗ್ಯವನ್ನು ಪಡೆದವರು ಉತ್ತಮ ಸಾಧನೆ ಮಾಡದಿದ್ದರೆ ಅದು ವ್ಯಕ್ತಿಯ ದೋಷವಾಗುತ್ತದೆ. ಮಿತ್ರರು ಕೇವಲ ಸಹಪಾಠಿಗಳಲ್ಲ. ದೀರ್ಘಕಾಲ ಒಡನಾಡಿಗಳಾಗಿರುವವರು. ವಿದ್ಯಾರ್ಥಿ ಜೀವನದಿಂದಲೂ ಜೊತೆಯಲ್ಲಿರುವುದರಿಂದ ಎಷ್ಟೋ ಸಂದರ್ಭದಲ್ಲಿ ಬಂಧುಗಳಿಗಿಂತ ಹೆಚ್ಚಿನ ಮಮಕಾರ ಸ್ನೇಹಿತರ ಮೇಲಿರುತ್ತದೆ.

ಈ ವಿಚಾರದಲ್ಲಿ ನಾನು ಅದೃಷ್ಟವಂತ. ಪ್ರೌಢಶಾಲಾ ಶಿಕ್ಷಣದಿಂದಲೂ ನನಗೆ ಒಳ್ಳೆಯ ಮಿತ್ರರು ಮತ್ತು ಗುರುಗಳು ದೊರೆತಿದ್ದಾರೆ. ಅಂತಹ ಮಿತ್ರರು ಈಗಲೂ ನನ್ನ ಸಂಪರ್ಕದಲ್ಲಿದ್ದಾರೆ. ಅದೇ ನನ್ನ ಪುಣ್ಯ. ನಾನು ಹುಬ್ಬಳ್ಳಿಯ ಕರ್ನಾಟಕ ಮೆಡಿಕಲ್ ಕಾಲೇಜ್‌ನಲ್ಲಿ ಎಂ.ಬಿ.ಬಿ.ಎಸ್ ವ್ಯಾಸಂಗ ಮಾಡುತ್ತಿರಬೇಕಾದರೆ ಡಾ. ಅಶೋಕ ಗೋಧಿಯವರು(ಜನನ.8.9.1949) ನನ್ನ ಸಹಪಾಠಿಗಳಾಗಿದ್ದರು.

### ಬಾಲ್ಯದಲ್ಲೇ ಮಹಾನ್ ಗುರಿಯನ್ನಿಟ್ಟುಕೊಂಡವರು

ಶ್ರೀಯುತರು ಕರ್ನಾಟಕದ ಪ್ರಸಿದ್ಧ ಸರ್ಜನ್. ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ಅನುಭವ ಅವರದು. ಬೆಳಗಾವಿ ಜವಾಹರಲಾಲ್ ನೆಹರು ವೈದ್ಯಕೀಯ ಕಾಲೇಜಿನಲ್ಲಿ ದೀರ್ಘ ಕಾಲ ಬೋಧಕರಾಗಿ, ಪ್ರಾಧ್ಯಾಪಕರಾಗಿ, ಡೀನ್ ಆಗಿ, ಕೊನೆಗೆ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿರುವ ಅವರಿಗೆ ಸಮಾಜದಲ್ಲಿ ಅತ್ಯುನ್ನತ ಸ್ಥಾನವಿದೆ. ಇಷ್ಟಾದರೂ ಡಾ.ಅಶೋಕ ಗೋಧಿ ಅವರು ತಮ್ಮ ವಿನಯವನ್ನು ಎಂದೂ ಮರೆತವರಲ್ಲ. ಎಂ.ಬಿ.ಬಿಎಸ್‌ನಿಂದ ಇಲ್ಲಿಯ ವರೆಗೆ ಅಂದರೆ ಸುಮಾರು ಐದು ದಶಕಗಳ ಕಾಲ ನಮ್ಮ ಸ್ನೇಹ ನಿರಂತರವಾಗಿ ಮುಂದುವರೆಯುತ್ತಾ ಬಂದಿದೆ. ಕೆ.ಎಂ.ಸಿಯಲ್ಲಿ 1968ರ ಎಂ.ಬಿ.ಬಿ.ಎಸ್. ಬ್ಯಾಚ್ ಎಂದರೆ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಾಧನೆಗಾಗಿ ಗುರುತಿಸಿಕೊಂಡ ಬ್ಯಾಚ್ ಎಂಬ ಹೆಗ್ಗಳಿಕೆ ಪಡೆದಿದೆ.

ಈ ಬ್ಯಾಚಿನ ಸದಸ್ಯರು ಈಗಲೂ ಪ್ರತಿವರ್ಷ ಜನವರಿ ತಿಂಗಳಲ್ಲಿ ಬೇರೆ ಬೇರೆ ಊರಿನಲ್ಲಿ ಸೇರಿ ನಮ್ಮ ಕಷ್ಟ, ಸುಖಗಳನ್ನು ಹಾಗೂ ವೈದ್ಯಕೀಯ ಲೋಕದಲ್ಲಿ ಆಗುತ್ತಿರುವ ಬೆಳವಣಿಗೆಯನ್ನು ಕುರಿತು ಚರ್ಚೆ ಮಾಡುತ್ತೇವೆ. ನಾವೆಲ್ಲಾ 75ರ ಆಸುಪಾಸಿನಲ್ಲಿ ಅಥವಾ ಅದನ್ನು ಮೀರಿದವರಾಗಿದ್ದರೂ ನಮ್ಮ ವಿದ್ಯಾರ್ಥಿ ಜೀವನದ ಹುರುಪು ಮಾಸದಿರುವುದು ನಮ್ಮ ತಂಡದ ವೈಶಿಷ್ಟ್ಯವಾಗಿದೆ.

ನಮ್ಮ ತಂಡದ ಪ್ರತಿಭಾವಂತ ವಿದ್ಯಾರ್ಥಿಗಳಲ್ಲಿ ಒಬ್ಬರಾಗಿರುವ ಡಾ. ಅಶೋಕ ಗೋಧಿ ಅವರನ್ನು ನೆನೆಯುವುದು ಚೇತನೋಹಾರಿಯಾದ ವಿಷಯ. ಇನ್ನು ಪರಿಚಯ ಮಾಡಿಕೊಡುವುದೆಂದರೆ ಮನಸ್ಸಿಗೆ ಮತ್ತಷ್ಟು ಮುದ ಕೊಡುವ ಸಂಗತಿ. ಡಾ.ಅಶೋಕ ಗೋಧಿ ಅವರ ಬದುಕು ಅನೇಕರಿಗೆ ಪ್ರೇರಣೆ ಕೊಡುವುದರಲ್ಲಿ ಯಾವುದೇ ಸಂಶಯವಿಲ್ಲ.

ಅಮೇರಿಕಾದ ಅಧ್ಯಕ್ಷ ಅಬ್ರಾಹಾಂ ಲಿಂಕನ್ ಕುರಿತು ಒಂದು ಮಾತು ಪ್ರಸಿದ್ಧವಾಗಿದೆ. 'ಗುಡಿಸಿಲಿನಿಂದ ಶ್ವೇತಭವನಕ್ಕೆ'. ಆದರೆ ಅದೇ ಮಾತನ್ನು ಡಾ.ಅಶೋಕ ಅವರ ವಿಚಾರದಲ್ಲಿ ಸ್ವಲ್ಪ ಬದಲಾವಣೆ ಮಾಡಿ 'ರಿಚಸ್ ಟು ರ್‍ಯಾಗ್ಸ ಆಂಡ್ ಬ್ಯಾಕ್' ಎಂದು ಹೇಳಬಹುದು. ಅವರ ಜೀವನದ ವಿವರಗಳನ್ನು ತಿಳಿಯುವ ಸಂದರ್ಭದಲ್ಲಿ ಈ ಮಾತುಗಳನ್ನು ಹೇಳಬೇಕಾಗಿದೆ.

### ಸಂಕಷ್ಟಕ್ಕೆ ಸಿಲುಕಿದ ಕುಟುಂಬವನ್ನು ರಕ್ಷಿಸಿದ ತಾಯಿ.

ಡಾ.ಅಶೋಕ ಅವರ ತಂದೆ ಸಂಗಮೇಶ್ ಆಗಿನ ಕಾಲದ ಬಿ.ಎ ಪದವೀಧರರಾಗಿದ್ದು ಬೆಳಗಾವಿಯಲ್ಲಿ ಬ್ರಿಟಿಶ್ ಸರ್ಕಾರದ ಸಹಕಾರ ಇಲಾಖೆಯಲ್ಲಿ ಸಹಾಯಕ ರಿಜಿಸ್ಟ್ರಾರಾಗಿ ಕೆಲಸ ಮಾಡುತ್ತಿದ್ದರು. ವಾಸಕ್ಕೆ ಬಂಗಲೆ, ಮನೆಯಲ್ಲಿ ಕೆಲಸಕ್ಕೆ ಆಳು-ಕಾಳು, ತಿರುಗಾಡಲಿಕ್ಕೆ ಕಾರು, ಡ್ರೈವರ ಎಲ್ಲ ಅನುಕೂಲಗಳಿದ್ದವು ನಿಜ, ಆದರೆ ಭವಿಷ್ಯಕ್ಕಾಗಿ ಉಳಿತಾಯದ ಕಡೆಗೆ ಅವರು ಎಳ್ಳಷ್ಟೂ ಗಮನ ಕೊಟ್ಟಿರಲಿಲ್ಲ. ಸಂಗಮೇಶ ಅವರು ಹೃದಯಾಘಾತದಿಂದ ಹಠಾತ್ತನೆ ನಿಧನರಾದಾಗ ಆಕಾಶವೇ ಕಳಚಿಬಿದ್ದ ಅನುಭವ. ಅವರ ತಾಯಿ, 38 ವರುಷದ ಶಿವಗಂಗಮ್ಮ ಅವರ ಮಡಿಲಲ್ಲಿ ಆರು ಮಕ್ಕಳು. ದೊಡ್ಡ ಮಗನಿಗೆ 17 ವರ್ಷ. ಒಂಬತ್ತು ತಿಂಗಳ ಕೈಕೂಸು ನಮ್ಮ ಅಶೋಕ. ಸ್ವಾಮಿ ವಿವೇಕಾನಂದರು ಹೇಳುವಂತೆ 'ಯಾವುದೇ ಕುಟುಂಬದ ತಂದೆ ನಿಧನರಾದರೂ ಮಕ್ಕಳು ಬೀದಿಗೆ ಬೀಳದೆ ಸುಸಂಸ್ಕೃತರನ್ನಾಗಿ ಬೆಳೆಸುವ ತಾಯಂದಿರು ಭಾರತದ ಎಲ್ಲೆಡೆ ಇದ್ದಾರೆ'. ಅದರಂತೆ ಅಶೋಕ ಅವರ ತಾಯಿ ಶಿವಗಂಗಮ್ಮ ಅವರು ಸಹ ಒಬ್ಬಂಟಿಯಾಗಿ ಇಡೀ ಕುಟುಂಬವನ್ನು ಕಷ್ಟ ಪಟ್ಟು ಮೇಲಕ್ಕೆತ್ತಿರುವ ಮಹಾಚೇತನವಾಗಿದ್ದಾರೆ. ಹಿರಿಯ ಅಧಿಕಾರಿಯ ಮಡದಿಯಾಗಿದ್ದ ಅವರು ಪತಿಯೊಂದಿಗೆ ಮುಂಬೈ, ಪುಣೆ, ವಿಜಾಪುರ ಬೆಳಗಾವಿ, ಧಾರವಾಡ, ಗದಗ ಮುಂತಾದ ಪಟ್ಟಣಗಳಲ್ಲಿ ವಾಸಿಸಿ. ಕನ್ನಡ, ಹಿಂದಿ, ಮರಾಠಿಯಲ್ಲಿ ಸುಲಲಿತವಾಗಿ ಮಾತನಾಡುವುದನ್ನು ಕರಗತಮಾಡಿಕೊಂಡಿದ್ದರು.



ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಡಾ. ಅಶೋಕ ಗೋಧಿ.

ಪತಿ ನಿಧನರಾದ ಮೇಲೆ ಮಾತೃಶ್ರೀ ಶಿವಗಂಗಮ್ಮ ಅವರು ತಮ್ಮ ಆರು ಮಕ್ಕಳ ಜೊತೆ ಬೆಳಗಾವಿಯಿಂದ ಧಾರವಾಡಕ್ಕೆ ಬಂದು, ಹಾವೇರಿಪೇಟೆಯ ಕೊಟ್ಟಣದ ಓಣಿಯಲ್ಲಿ ಮನೆ ಮಾಡಿದರು. ಇದು ಬಡ ರೈತರ ಮತ್ತು ವ್ಯಾಪಾರಸ್ತರ ವಸತಿ ಪ್ರದೇಶವಾಗಿತ್ತು. ಗಾಳಿ ಬೆಳಕು ನೀರು ಇಲ್ಲದ ಗುಡಿಸಲಿನಂತಿದ್ದ ಆ ಮನೆ ಕರಿ ಹೆಂಚು ಹೊಚ್ಚಿದ ಮಣ್ಣಿನ ಮನೆಯಾಗಿತ್ತು. ಆರ್ಥಿಕ ನೆರವು ಒದಗಿಸಲು ಯಾರೂ ಮುಂದೆ ಬರಲಿಲ್ಲ. ಆರ್ಥಿಕ ಪರಿಸ್ಥಿತಿ ತೀರ ಕನಿಷ್ಟ ಮಟ್ಟಕ್ಕಿಳಿದಿತ್ತು. ಹಸು ಸಾಕಿ, ಮನೆ ಮನೆಗೆ ಹಾಲು ಮಾರಿ, ಜೀವನ ನಿರ್ವಹಿಸುವ ಪ್ರಸಂಗ ಬಂದರೂ ಧೃತಿಗೆಡದೆ ಶಿವಗಂಗಮ್ಮ ಅವರು ಮಕ್ಕಳನ್ನು ಶಿಸ್ತಿನಿಂದ ಬೆಳೆಸತೊಡಗಿದರು. ಅವರ ವಿದ್ಯಾಭ್ಯಾಸಕ್ಕಾಗಿ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡರು.

ಡಾ.ಅಶೋಕ ಅವರ ದೊಡ್ಡ ಅಣ್ಣನಿಗೆ ತಂದೆಯ ಸಾವಿನ ಅನುಕಂಪದ ಆಧಾರದಲ್ಲಿ ಸಹಕಾರ ಇಲಾಖೆಯಲ್ಲಿ ಕೆಲಸ ದೊರೆಯಿತು. ಅವರು ಮುಂದೆ ರೇಡಿಯೋ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದು ಬಾಬಾ ಅಣು ಸಂಶೋಧನಾ ಕೇಂದ್ರಕ್ಕೆ ಸೇರ್ಪಡೆಯಾದರು. ಎರಡನೆಯ ಅಣ್ಣ ಸಂಜೀವ ಸಹಕಾರ ಇಲಾಖೆಯಲ್ಲಿ ಕೆಲಸ ಮಾಡುತ್ತಾ, ತಾಯಿಗೆ ಬೆಂಬಲವಾಗಿ ನಿಂತರು. ಮೂರನೆಯ ಅಣ್ಣ ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಬಿ.ಇ. ಪದವಿ ಪಡೆದು ಕೊಲ್ಹಾಪುರದಲ್ಲಿ ಎಮ್. ಎಸ್.ಇ.ಬಿ ಯಲ್ಲಿ ಇಂಜಿನಿಯರ್ ಆಗಿ ಸೇರಿಕೊಂಡರು.. ಅಕ್ಕ ಎಮ್.ಬಿ.ಬಿ.ಎಸ್ ಮುಗಿಸಿ ಮೆಡಿಕಲ್ ಆಫೀಸರ್ ಆಗಿ ಕೆಲಸಕ್ಕೆ ಹತ್ತಿದರು.. ಇನ್ನೊಬ್ಬ ಅಣ್ಣ ಬಿ.ಇ ಮುಗಿಸಿ ಬೆಂಗಳೂರಿನ ಭಾರತ ಇಲೆಕ್ಟ್ರೋನಿಕ್ಸ್ ನಲ್ಲಿ ಸೇರಿಕೊಂಡರು. ಎಲ್ಲಾ ಅಣ್ಣಂದಿರು ಡಾ.ಅಶೋಕ ಅವರ ಸ್ನಾತಕೋತ್ತರ ಶಿಕ್ಷಣಕ್ಕಾಗಿ ಧನ ಸಹಾಯ ಮಾಡಿದ್ದಾರೆ. ಶಿವಗಂಗಮ್ಮ ಅವರು ಮಕ್ಕಳನ್ನು ಓದಿಸಲು ಮಾಡಿದ, ಕಠಿಣ ತಪಸ್ಸಿಗೆ ಕಡಿಮೆಯಿಲ್ಲದ, ಸಾಹಸವನ್ನು ಶಬ್ದಗಳಲ್ಲಿ ವರ್ಣಿಸುವದು ಸಾಧ್ಯವಿಲ್ಲ.

### ತಾಯಿ ತೋರಿಸಿದ ಗುರಿ

ಮಾತೃಶ್ರೀ ಶಿವಗಂಗಮ್ಮ ಅವರು ಅಶೋಕ ಅವರಿಗೆ ಬಾಲ್ಯದಿಂದಲೇ 'ನೀನು ಡಾಕ್ಟರ ಆಗಬೇಕು' ಎಂದು ಹೇಳುತ್ತಿದ್ದರಂತೆ. ಚಿಕ್ಕಂದಿನಲ್ಲಿ ತಾಯಿಯ ಜೊತೆ ಚಲನಚಿತ್ರ ನೋಡಿ ಬರುವಾಗ ನಮ್ಮ ಅಶೋಕ ಅವರು 'ಅವ್ವ, ಚಿತ್ರದಲ್ಲಿ ನಾಯಕ ನಾಯಕಿಯರು ಮದುವೆಯಾದರೂ ಅವರಿಗೆ ಮಕ್ಕಳಾಗುವುದಿಲ್ಲವಲ್ಲ? ಮುಂದಿನ ಚಿತ್ರದಲ್ಲೂ ಹೀಗೇ ಇರುತ್ತಾರಲ್ಲ?' ಎಂದು ಕೇಳುತ್ತದ್ದರಂತೆ. ತಾಯಿ "ನೀನು ಡಾಕ್ಟರ್ ಆಗು, ಆಗ ನಿನಗೆ ತಿಳಿಯುತ್ತದೆ" ಎಂದು ಹೇಳುತ್ತಿದ್ದರಂತೆ. ಜೀವನದ ಪ್ರತಿ ಘಟ್ಟದಲ್ಲಿ ಅಶೋಕ ಅವರಿಗೆ ಅವರ ತಾಯಿ ಜೀವನದ ಗುರಿಯನ್ನು ನೆನಪಿಸುತ್ತಿದ್ದರು.

### ತಾಯಿಯೇ ಸ್ಫೂರ್ತಿ

ಶಿವಗಂಗಮ್ಮ ಅವರು ಸಾಹಸಶೀಲರು, ವಾಸ್ತವಪ್ರಜ್ಞೆಯುಳ್ಳವರು. ಎಲ್ಲಾ ವರ್ಗದ ಜನರ ಜೊತೆ ಬೆರೆಯುತ್ತಿದ್ದರು. ಕುಟುಂಬಕ್ಕೆ ಆರ್ಥಿಕ ತೊಂದರೆಯಿತ್ತು. ಆದರೆ ಪ್ರೀತಿ ಮತ್ತು ಸೌಹಾರ್ದಗಳಿಗೆ ಕೊರತೆಯಿರಲಿಲ್ಲ. ಅವರ ತಾಯಿ ಪ್ರತಿದಿನ ಶಿವ, ಬಸವ, ಬುದ್ಧ ಮತ್ತು ಏಸುವನ್ನು ಪೂಜಿಸುತ್ತಿದ್ದರು. ಅವರದು ಶುದ್ಧ ಜಾತ್ಯತೀತ ಮನಸ್ಸು ಎಂದು ಡಾ.ಅಶೋಕ ಹೇಳುತ್ತಾರೆ. ಶಿವಗಂಗಮ್ಮ ಅವರು ತಮ್ಮ ಸುತ್ತಮುತ್ತ ಜನರ ಬದುಕಿನ ಬಗ್ಗೆ ಸಹಜವಾಗಿ ಸಂವೇದನಾಶೀಲರಾಗಿದ್ದರು. ಯಾರದೇ ಮನೆಯಲ್ಲಿ ಏನಾದರೂ ಕಷ್ಟ ಬಂದರೆ ಅವರು ಹೋಗಿ ಜೊತೆ ನಿಲ್ಲುತ್ತಿದ್ದರು. ಆ ಓಣಿಯ ಜನ ತುಂಬಾ ಮುಗ್ಧರು, ಮೌಢ್ಯದಲ್ಲಿ ಮುಳುಗಿದ್ದವರು. ರೋಗ ರುಜಿನ ಬಂದರೆ ಆಸ್ಪತ್ರೆಗೆ ಹೋಗುತ್ತಿರಲಿಲ್ಲ. ಶಿವಗಂಗಮ್ಮ ಅವರಿಗೆ ತಿಳಿಹೇಳಿ ಆಸ್ಪತ್ರೆಗೆ ಕಳಿಸುತ್ತಿದ್ದರು. ಮಕ್ಕಳನ್ನು ಶಾಲೆಗೆ ಸೇರಿಸುವಂತೆ ಒತ್ತಾಯ ಮಾಡುತ್ತಿದ್ದರು. ಇಡೀ ಓಣಿಯಲ್ಲಿ ಶಿವಗಂಗಮ್ಮ ಅವರು ಎಲ್ಲರಿಗೂ ಬೇಕಾದವರಾಗಿದ್ದರು. ಒಮ್ಮೆ ಪುಣೆಯಲ್ಲಿ ಓದುತ್ತಿದ್ದ ಅಶೋಕನ ಸಹೋದರನಿಗೆ ಫೀ ಕಟ್ಟಲು ಹಣದ ಕೊರತೆ ಇರುವುದನ್ನು ಕೇಳಿದ ನೆರಮನೆಯ ಹೆಂಗಸು ಇವರ ಮನೆಗೆ ಬಂದು, ಕೊರಳಲ್ಲಿದ್ದ ಬಂಗಾರದ ಸರವನ್ನು ಕಳಚಿ ಶಿವಗಂಗಮ್ಮನ ಕೈಯಲ್ಲಿಟ್ಟು, 'ತಾಯಿ ಇದನ್ನು ಒತ್ತೆ ಇಟ್ಟು ಹಣ ತೆಗೆದುಕೊಂಡು ಮಗನಿಗೆ ಕಳಿಸಿ. ಮುಂದೆ ಬಿಡಿಸಿ ಕೊಳ್ಳೋಣ ಚಿಂತೆ ಬೇಡ' ಎಂದು ಹೇಳಿದ ಪ್ರಸಂಗವನ್ನು ಅಶೋಕ ಅವರ ತಾಯಿ ಮೇಲಿಂದ ಮೇಲೆ ನೆನಪಿಸಿಕೊಳ್ಳುತ್ತಿದ್ದರಂತೆ. ಅವರ ಜನಪ್ರಿಯತೆಗೆ ಇದು ಸಾಕ್ಷಿ. ಇನ್ನೊಬ್ಬರಿಗೆ ನಾವು ತೋರುವ ಸಂವೇದನಾಶೀಲತೆ ವ್ಯರ್ಥವಾಗದೇ ಒಂದಿಲ್ಲ ಒಂದು ದಿನ ಒಂದಿಲ್ಲ ಒಂದು ರೂಪದಲ್ಲಿ ನಮಗೇ ತಿರುಗಿ ದೊರಕುವುದರಲ್ಲಿ ಸಂದೇಹವಿಲ್ಲ.

ಐವತ್ತು ವರ್ಷಗಳ ಹಿಂದೆಯೇ ಶಿವಗಂಗಮ್ಮ ಅವರು ಶಿಕ್ಷಣದ ಮಹತ್ವ ಅರಿತು ಅದಕ್ಕೆ ಪ್ರಥಮ ಪ್ರಾಶಸ್ತ್ಯ ನೀಡಿದರು ಎನ್ನುವುದು ಗಮನಿಸಬೇಕಾದ ವಿಚಾರ. ಆಳು-ಕಾಳುಗಳುಳ್ಳ ಬಂಗಲೆಯಲ್ಲಿದ್ದ ಆಕೆ ಆರು ಮಕ್ಕಳೊಂದಿಗೆ ಮಣ್ಣಿನ ಗುಡಿಸಲಿನಲ್ಲಿ ವಾಸ. ಕುಟುಂಬದ ನಿರ್ವಹಣೆಗಾಗಿ, ಮಕ್ಕಳ ಶಿಕ್ಷಣಕ್ಕಾಗಿ ಮನೆಯಲ್ಲಿದ್ದ ಒಡವೆ ಹಾಗೂ ಉಪಕರಣಗಳ ಮಾರಾಟ. ಮನೆಯಲ್ಲಿ ಯಾವುದೇ ಹಬ್ಬದ ಆಚರಣೆ ಮಾಡುತ್ತಿರಲಿಲ್ಲ. ಹಸುವಿನ ಸಗಣಿ ಸಂಗ್ರಹಿಸಿ, ಭರಣಿ ತಯಾರಿಸಿ ಒಲೆ ಹೊತ್ತಿಸಲು ಸೌದೆಯ ಬದಲು ಉಪಯೋಗಿಸುತ್ತಿದ್ದರು. ಮಕ್ಕಳ ಶಿಕ್ಷಣಕ್ಕಾಗಿ ಕಷ್ಟ ಪಡುತ್ತಿರುವುದನ್ನು ಕಂಡು ಅಕ್ಕಪಕ್ಕದವರು 'ಗಂಡು ಮಕ್ಕಳನ್ನು ಲೆಕ್ಕ ಬರೆಯಲು ಸಾಹುಕಾರರ ಅಂಗಡಿಗೆ ಕಳುಹಿಸಬಾರದೆ?' ಎಂದು ಸಲಹೆ ಕೊಡುತ್ತಿದ್ದರು. ಎಷ್ಟೇ ಕಷ್ಟ ಬಂದರೂ ಮಕ್ಕಳು ಓದಬೇಕು ಎನ್ನುವುದಷ್ಟೇ ಅವರ ಗುರಿಯಾಗಿತ್ತು. ಇಡೀ ಓಣಿಯಲ್ಲಿ ಇವರ ಕುಟುಂಬ ಆದರ್ಶವಾದ ಕುಟುಂಬವೆಂದು ಖ್ಯಾತಿ ಪಡೆದಿತ್ತು. ಮಾತೃಶ್ರೀ ಶಿವಗಂಗಮ್ಮ ಅವರ ಎಲ್ಲಾ ಮಕ್ಕಳು ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಪಡೆದ ಪದವೀಧರರು.

### ಪ್ರತಿಭಾವಂತರು ಜೊತೆಗೆ ಕಷ್ಟಜೀವಿಗಳು

ಶಿವಗಂಗಮ್ಮ ಅವರ ಮಕ್ಕಳಲ್ಲಿ ಕೊನೆಯವರಾದ ಡಾ. ಅಶೋಕ ಬಾಲ್ಯದಿಂದಲೂ ಪ್ರತಿಭಾವಂತ ವಿದ್ಯಾರ್ಥಿ. 4ನೇ ಮತ್ತು ಏಳನೇ ವರ್ಗದ ಪರೀಕ್ಷೆಗಳಲ್ಲಿ ಧಾರವಾಡ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ವಿದ್ಯಾರ್ಥಿ ವೇತನ ಪಡೆದರು. ಎಸ್.ಎಸ್.ಎಲ್.ಸಿ.ಯಲ್ಲಿ ಕನ್ನಡ ಭಾಷೆ ತೆಗೆದುಕೊಂಡು 19 ರಾಂಕ್ ಪಡೆದರು. ಅದೇ ರೀತಿ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದು ತಮ್ಮ ಪ್ರತಿಭೆಯ ಮೇಲೆ ಹುಬ್ಬಳ್ಳಿಯ ಕರ್ನಾಟಕ ಮೆಡಿಕಲ್ ಕಾಲೇಜ್‌ನಲ್ಲಿ ಸೀಟು ಪಡೆದರು. ಇದು ಸರ್ಕಾರಿ ಮೆಡಿಕಲ್ ಕಾಲೇಜು. ಕರ್ನಾಟಕ ಮೆಡಿಕಲ್ ಕಾಲೇಜ್‌ನಲಿ ಪ್ರತಿಭಾವಂತ ವಿದ್ಯಾರ್ಥಿಗಳು ಮೆಡಿಕಲ್ ಸೀಟು ಪಡೆಯುತ್ತಾರೆ.

ನಾನು ಸಹ ಡಾ. ಅಶೋಕ ಅವರಂತೆ 1968ರ ಎಂಬಿಬಿಎಸ್ ಬ್ಯಾಚ್‌ನ ವಿದ್ಯಾರ್ಥಿ. ಹುಬ್ಬಳ್ಳಿಯ ಕರ್ನಾಟಕ ಮೆಡಿಕಲ್ ಕಾಲೇಜು ತನ್ನ ವಿಶಿಷ್ಟ ವೈದ್ಯಕೀಯ ಶೈಕ್ಷಣಿಕ ಪರಂಪರೆಗೆ ಹೆಸರಾಗಿದೆ. ನಮ್ಮ ಬ್ಯಾಚಿಗೆ ಪ್ರೊ.ಪಿ.ವಿ.ಹೆಗ್ಗಡೆ, ಡಾ.ಎಸ್.ಎಲ್.ಬೋರೇಗೌಡ, ಪ್ರೊ.ಎನ್. ಕೆ.ಚನ್ನಪ್ಪ, ಪ್ರೊ.ಕೃಷ್ಣಭಾರ್ಗವ್, ಡಾ.ಆರ್. ಎಚ್.ಕುಲಕರ್ಣಿ ಪ್ರೊ. ಆರ್.ಎಚ್.ಎನ್.ಶಣೈ, ಡಾ.ಗೋಪಿನಾಥ್, ಪ್ರೊ.ಚೌಕರ್, ಪ್ರೊ. ಅನಂತರಾಜು, ಪ್ರೊ..ಕೌಲಗುಡ್ಡ ಮೊದಲಾದ ಅತ್ಯುತ್ತಮ ಅಧ್ಯಾಪಕರು ಪಾಠ ಹೇಳಿದ್ದಾರೆ. ಅವರು ಕೇವಲ ವೈದ್ಯಕೀಯ ವಿಷಯದ ಅಧ್ಯಾಪಕರಾಗಿರಲಿಲ್ಲ, ಬದುಕಿನ ಪಾಠವನ್ನು ಬೋಧಿಸುವ ಮಾರ್ಗದರ್ಶಕರಾಗಿದ್ದರು. ಯಶಸ್ವಿ ವೈದ್ಯರಾಗಲು ಬೆಳೆಸಿಕೊಳ್ಳಬೇಕಾದ ಗುಣಗಳನ್ನು ಅವರು ನಮಗೆ ತಿಳಿಸಿಕೊಟ್ಟರು.

### ವೃತ್ತಿಯಲ್ಲಿ ಯಶಸ್ಸು

ಡಾ. ಅಶೋಕ ಗೋಧಿ ಅವರು ಎಂ.ಬಿ.ಬಿ.ಎಸ್. ಪದವಿ ಮುಗಿದ ನಂತರ ನೇರವಾಗಿ ಸರ್ಜರಿಯಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಅದೇ ಕಾಲೇಜಿಗೆ ಸೇರ್ಪಡೆಯಾದರು. ನಾನು ಮೂರು ವರ್ಷ ನವಲಗುಂದದಲ್ಲಿ ಖಾಸಗಿ ಪ್ರಾಕ್ಟೀಸ್ ಮಾಡಿ ಮೂರುವರ್ಷದ ನಂತರ ಸರ್ಜರಿಯಲ್ಲಿ ಎಮ್.ಎಸ್ ಮಾಡಲು ಸೇರ್ಪಡೆಯಾದೆ.

ಡಾ.ಅಶೋಕ ಗೋಧಿ ಅವರು ಸ್ನಾತಕೋತ್ತರ ಪದವಿ ಪಡೆದ ನಂತರ ಸಾಂಬ್ರಾ ಹತ್ತಿರದ ಮಿಷನ್ ಆಸ್ಪತ್ರೆಯಲ್ಲಿ ವೈದ್ಯರಾಗಿ ಸ್ವಲ್ಪದಿನ ಕೆಲಸ. ನಂತರ ಜೆ.ಎನ್. ವೈದ್ಯಕೀಯ ಕಾಲೇಜಿಗೆ ಸೇರ್ಪಡೆ. ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳಿಗೆ ಬೋಧನೆ ಅವರಿಗೆ ಪ್ರಿಯವಾದ ಕೆಲಸ. ಅವರಿಂದ ತರಬೇತಿ ಪಡೆದ ಸಾವಿರಾರು ವೈದ್ಯರು ಮತ್ತು ಸರ್ಜನ್‌ಗಳು ದೇಶ ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ.

ಡಾ. ಅಶೋಕ ಗೋಧಿ ಅವರು ವಿಶ್ವವಿದ್ಯಾಲಯದ ಅನೇಕ ವಿಭಾಗಗಳ ಮುಖ್ಯಸ್ಥರಾಗಿ ಕೆಲಸ ಮಾಡಿದ್ದಾರೆ. ಅವರ ಮಾರ್ಗದರ್ಶನದಲ್ಲಿ ನಾಲ್ವರು ಪಿಹೆಚ್.ಡಿ. ಪದವಿಯನ್ನು ಗಳಿಸಿದ್ದಾರೆ. ಅವರ ಶೈಕ್ಷಣಿಕ ಸಾಧನೆ ಗಮನಿಸಿ 2017ರಲ್ಲಿ ಉಟಛಿಂರಂತಿ ವಿಶ್ವ ವಿದ್ಯಾಲಯದ `The Royal College of

Physicians and Surgeons' ವೈದ್ಯಕೀಯ ಮಹಾವಿದ್ಯಾಲಯದಿಂದ F.R.C.S ಗೌರವ ಪದವಿ ಬಂದಿದೆ. ಅಖಿಲ ಭಾರತ ಸರ್ಜನ್ಸ್ ಅಸೋಶಿಯೇಶನ್‌ನ ಕರ್ನಾಟಕ ಶಾಖೆಯ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಬೆಳಗಾವಿಯ ಕೆಎಲ್‌ಇ ಸಂಸ್ಥೆಯ ವೈದ್ಯಕೀಯ ಸಂಸ್ಥೆಗಳೆಲ್ಲ ಸೇರಿ ಈಗ KLE Academy of Higher Education and Research- Deemed Universisty ಆಗಿ ಪರಿವರ್ತನೆಗೊಂಡಿವೆ. ಇದರ ಬೆಳವಣಿಗೆಯಲ್ಲೂ ಡಾ.ಅಶೋಕ ಗೋಧಿ ಅವರ ಪಾತ್ರವಿರುವುದನ್ನು ಮರೆಯುವಂತಿಲ್ಲ.

ನಿವೃತ್ತಿಯ ನಂತರ ಡಾ.ಅಶೋಕ ಗೋಧಿ ಅವರು ಕೆಎಲ್‌ಇ ಆಸ್ಪತ್ರೆಯ ಸರ್ಜರಿ ವಿಭಾಗದಲ್ಲಿ ಸೇವೆಯನ್ನು ಮುಂದುವರೆಸಿದ್ದಾರೆ. ಮಲೇಶಿಯಾದ ಅಂತರಾಷ್ಟ್ರೀಯ ವೈದ್ಯಕೀಯ ಕಾಲೇಜಿನ ಸರ್ಜರಿ ವಿಭಾಗದ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ.

ಬೆಳಗಾವಿಯಲ್ಲಿ ಲೆಪರೊಸ್ಕೊಪಿಕ್ ಸರ್ಜರಿಯನ್ನು ಪರಿಚಯಿಸಿದ ಶ್ರೇಯಸ್ಸು ಡಾ.ಅಶೋಕ ಗೋಧಿ ಅವರಿಗೆ ಸಲ್ಲುತ್ತದೆ. ಅಲ್ಲದೆ ವ್ಹಿಪಲ್ಸ ಆಪರೇಶನ್, ಸ್ಟೆನ್ಸನ್ಸ್ ಆಪರೇಶನ್, ಲಂಗ್ ಲೊಬೆಕ್ಟಮಿ, ಮಿಸೊಕೆವಲ್ ಶಂಟ್ ಮುಂತಾದ ಅನೇಕ ಶಸ್ತ್ರಚಿಕಿತ್ಸೆಗಳನ್ನು ಬೆಳಗಾವಿಯಲ್ಲಿ ಪ್ರಪ್ರಥಮ ಬಾರಿಗೆ ಯಶಸ್ವಿಯಾಗಿ ನೆರವೇರಿಸಿದ ಕೀರ್ತಿ ಅವರದು.

### ವೃತ್ತಿಯಲ್ಲಿ ಮಹತ್ವದ ಸಾಧನೆ

ಡಾ.ಅಶೋಕ ಗೋಧಿ ಅವರ ವೃತ್ತಿಜೀವನದ ಅತ್ಯಂತ ಪರೀಕ್ಷಾಕಾಲವೆಂದರೆ ಡಾ.ಪ್ರಭಾಕರ ಕೋರೆ ಅವರನ್ನು ರಕ್ಷಿಸಿದ್ದು. ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿರುವ ಡಾ.ಪ್ರಭಾಕರ ಕೋರೆ ಅವರಿಗೆ 2016 ರಲ್ಲಿ ದುಷ್ಕರ್ಮಿಗಳು ಗುಂಡು ಹೊಡೆದರು. ಪ್ರಭಾಕರ ಕೋರೆ ಅವರಿಗೆ ಪ್ರಜ್ಞೆಯಿರಲಿಲ್ಲ. ಇದು ರಾಷ್ಟ್ರೀಯ ಸುದ್ದಿಯಾಯಿತು. ಡಾ.ಕೋರೆ ಅವರ ಹಿತೈಷಿಗಳು ಮುಂಬೈಯಿಂದ ಏರ್–ಅಂಬುಲೈನ್ಸ್ ಬೆಳಗಾವಿಗೆ ತರಿಸಿದರು. ಅವರನ್ನು ಮುಂಬೈಗೆ ಕರೆದಕೊಂಡು ಹೋಗುವ ಸಿದ್ಧತೆಯೂ ನಡೆದಿತ್ತು. ಆಗ ಕೋರೆ ಕುಟುಂಬದವರು ಡಾ.ಅಶೋಕ ಗೋಧಿ ಅವರ ಸಲಹೆ ಕೇಳಿದರು. ಅದಕ್ಕೆ ಡಾ. ಅಶೋಕ ಅವರು 'ನನ್ನ ಸಹೋದರನಾಗಿದ್ದರೆ ಅವರನ್ನು ನಾನು ಎಲ್ಲಿಗೂ ಕಳುಹಿಸುತ್ತಿರಲಿಲ್ಲ, ನಾನೇ ಶಸ್ತ್ರಚಿಕಿತ್ಸೆ ಮಾಡುತ್ತಿದ್ದೆ' ಎಂದರು. ಈ ಒಂದು ಮಾತು ಡಾ.ಪ್ರಭಾಕರ ಕೋರೆ ಅವರ ಕುಟುಂಬದ ಮೇಲೆ ಸಕಾರಾತ್ಮಕ ಪರಿಣಾಮ ಬೀರಿತು. ಎಲ್ಲರೂ ಡಾ.ಅಶೋಕ ಅವರೇ ಡಾ.ಪ್ರಭಾಕರ ಕೋರೆ ಅವರಿಗೆ ಆಪರೇಷನ್ ಮಾಡಬೇಕು ಎಂದು ನಿರ್ಧಾರ ಮಾಡಿದರು. ಡಾ.ಅಶೋಕ ಗೋಧಿ ಅವರು ತಮ್ಮ ಸಹೋದ್ಯೋಗಿಗಳೊಂದಿಗೆ ಸತತವಾಗಿ ಆರು ಘಂಟೆಗಳ ಕಾಲ ಕೋರೆ ಅವರಿಗೆ ಆಪರೇಷನ್ ಮಾಡಿದರು. ಅವರ ದೇಹದಲ್ಲಿದ್ದ ಮೂರು ಗುಂಡುಗಳಲ್ಲಿ ಎರಡು ಹೊರತೆಗೆದರು. ಈಗ ಡಾ.ಪ್ರಭಾಕರ ಕೋರೆ ಅವರು ಆರೋಗ್ಯವಾಗಿ ತಮ್ಮ ಶೈಕ್ಷಣಿಕ ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಬೆಳಗಾವಿಯಂತಹ ಜಿಲ್ಲಾ ಕೇಂದ್ರದಲ್ಲಿ ಇಂತಹ ಆಪರೇಷನ್ ಮಾಡುವುದಕ್ಕೆ ಎಂಟೆದೆ ಬೇಕು. ಡಾ.ಅಶೋಕ ಗೋಧಿ ಅವರ ಬದುಕಿನಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ಸನ್ನಿವೇಶವಿದು.



ಎಡಗಡೆಯಿಂದ: ಡಾ.ಪೂರ್ಣಚಂದ್ರ, ಡಾ.ಸತ್ಯಜಿತ್, ಡಾ.ರಾಜಕಿಶೋರಿ, ಡಾ.ಸೋನಾಲಿ
ಕುಳಿತವರು: ಕುಮಾರಿ ನಿಶಾ, ಡಾ.ಅಶೋಕಗೋಧಿ, ಶ್ರೀಮತಿ ರಂಜನಾ ಅಶೋಕ ಗೋಧಿ, ಕುಮಾರಿ ನೀತು.

ಡಾ.ಅಶೋಕ ಗೋಧಿ ಅವರಿಗೆ ಕೆಎಲ್‌ಇ ವಿಶ್ವ ವಿದ್ಯಾಲಯ 'ಃಭಣ ಖಿಜಚಿಥಿಜಡಿ ಚಿಟಿಜ ಖಿಜಚಿಥಿಜಡಿ ಠಜಿ ಖಿಜಚಿಥಿಜಡಿ' ಪ್ರಶಸ್ತಿ ನೀಡಿ ಗೌರವಿಸಿತು. ಮಗನ ಸಾಧನೆ ನೋಡಿ 98ವರ್ಷದ ಮಾತೃಶ್ರೀ ಶಿವಗಂಗಮ್ಮ ಕಣ್ಣು ತುಂಬಿಕೊಂಡಿದ್ದರು. ಡಾ.ಅಶೋಕ ಗೋಧಿ ಅವರು ತಮ್ಮ ತಾಯಿಯ ಹೆಸರಿನಲ್ಲಿ ಕೆಎಲ್‌ಇ ಸಂಸ್ಥೆಯಲ್ಲಿ ಚಿನ್ನದ ಪದಕ ಸ್ಥಾಪಿಸಿದ್ದಾರೆ.

ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ನಾಲ್ಕು ದಶಕಗಳ ಕಾಲ ಕೆಲಸ ಮಾಡಿರುವ ಡಾ.ಅಶೋಕ ಗೋಧಿಯವರನ್ನು, 'ತಮ್ಮ ಅನುಭವದಲ್ಲಿ ಯುವ ವೈದ್ಯರಿಗೆ ಮತ್ತು ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ತಾವು ಕೊಡುವ ಸಂದೇಶವೇನು?' ಎಂದಾಗ ಅವರು " ನ್ಯಾಷನಲ್ ಮೆಡಿಕಲ್ ಕಮಿಷನ್ ಸಿದ್ಧ ಪಡಿಸಿರುವ ನೂತನ ಪಠ್ಯಕ್ರಮದಲ್ಲಿ ವೈದ್ಯ ವಿದ್ಯಾರ್ಥಿಗಳ ಸಂವಹನ ಕೌಶಲ್ಯಕ್ಕೆ ಮಹತ್ವ ಕೊಟ್ಟಿರುವುದು ಮತ್ತು ಪ್ರಾಯೋಗಿಕ ತರಬೇತಿಗೆ ಆದ್ಯತೆ ಕೊಟ್ಟಿರುವುದು ಸ್ವಾಗತಾರ್ಹ ಕ್ರಮ. ನೂತನ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಬೇಕು. ವೈದ್ಯರಾಗಿ ಅದರಲ್ಲೂ ಸ್ನಾತಕೋತ್ತರ ಪದವಿ ಪಡೆದಿರುವವರು ರೋಗಿಗಳ ಸೇವೆಯಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಬೇಕು. ಸಮಾಜ ಅವರ ಶಿಕ್ಷಣಕ್ಕೆ ಸಾಕಷ್ಟು ವೆಚ್ಚ ಮಾಡಿರುತ್ತದೆ. ಅದು ವ್ಯರ್ಥವಾಗಬಾರದು" ಎಂದಿದ್ದಾರೆ. ಇದರಲ್ಲೂ ಅವರ ಸಾಮಾಜಿಕ ಕಳಕಳಿಯನ್ನು ಗಮನಿಸಬಹುದು.

### ಯಶಸ್ಸಿನ ಹಿಂದಿರುವ ಶಕ್ತಿ

ಡಾ.ಅಶೋಕ ಗೋಧಿ ಅವರ ಬದುಕಿನಲ್ಲಿ ಅವರ ತಾಯಿಯ ನಂತರ ಮತ್ತೊಬ್ಬ ವ್ಯಕ್ತಿ ಅತ್ಯಂತ ಪ್ರಮುಖವಾದ ಸ್ಥಾನ ಪಡೆದಿದ್ದಾರೆ. ಅವರೇ ಡಾ.ಅಶೋಕ ಗೋಧಿ ಅವರ ಪತ್ನಿ ಶ್ರೀಮತಿ ರಂಜನಾ. ಇವರು ಕನ್ನಡದ ಖ್ಯಾತ ಕವಿ, ನಾಡೋಜ ಪ್ರಶಸ್ತಿ ಪುರಸ್ಕೃತರಾಗಿದ್ದ ಡಾ.ಚನ್ನವೀರ ಕಣವಿ ಮತ್ತು ಸಣ್ಣ ಕತೆಗಳ ಲೇಖಕಿ ಶ್ರೀಮತಿ ಶಾಂತಾದೇವಿ ಕಣವಿ ಅವರ ಸುಪುತ್ರಿ. ಡಾ.ಅಶೋಕ ರಂಜನಾ ದಂಪತಿಗೆ ಇಬ್ಬರು ಮಕ್ಕಳು. ಮಗಳು ಡಾ.ರಾಜಕಿಶೋರಿ ಪ್ರಖ್ಯಾತ ಇ.ಎನ್.ಟಿ. ಸರ್ಜನ್. ಅವರ ಪತಿ ವೈದ್ಯರು ಮೆಡಿಕಲ್ ಗ್ಯಾಸ್ಟ್ರೋಎಂಟರೊಲೊಜಿಸ್ಟ, ಮಗ ಡಾ. ಸತ್ಯಜಿತ್. ಸರ್ಜಿಕಲ್ ಗ್ಯಾಸ್ಟ್ರೋಎಂಟಾರಲಾಜಿಸ್ಟ್. ಅವರ ಪತ್ನಿ ರೆಡಿಯೊಲೊಜಿಸ್ಟ.

ಶ್ರೀಮತಿ ರಂಜನಾ ಅವರು ಸಮಾಜಶಾಸ್ತ್ರದಲ್ಲಿ ಪಿಹೆಚ್.ಡಿ. ಮಾಡಿ, ಕೆಎಲ್‌ಇ ಸಂಸ್ಥೆಯ ಲಿಂಗರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ನಿವೃತ್ತರಾಗಿದ್ದಾರೆ.

### ಆದರ್ಶಪ್ರಾಯರು

ಡಾ.ಅಶೋಕ ಗೋಧಿ ಅವರ ಜೀವನ ಎಲ್ಲಾ ದೃಷ್ಟಿಯಿಂದಲೂ ಆದರ್ಶಪ್ರಾಯವಾದದ್ದು. ಶಾಲಾಜೀವನದಲ್ಲಿ ವೈದ್ಯರಾಗಬೇಕು ಎಂದುಕೊಂಡು ಅದಕ್ಕೆ ತಕ್ಕಂತೆ ಸಾಧನೆ ಮಾಡಿ ವೈದ್ಯರಾದರು. ವೈದ್ಯರಾದ ಮೇಲೆ ವಿದ್ಯಾರ್ಥಿಗಳಿಗೆ ಮತ್ತು ರೋಗಿಗಳಿಗೆ ತಮ್ಮ ಬದುಕನ್ನು ಮೀಸಲಿಟ್ಟಿರುವರು. ನಿವೃತ್ತಿಯ ನಂತರ ಅದೇ ಶೈಕ್ಷಣಿಕ ಸೇವೆಯನ್ನು ಮುಂದುವರೆಸಿದ್ದಾರೆ. ಕೌಟಂಬಿಕವಾಗಿ ಸಂತೃಪ್ತ ಜೀವನ ಅವರದು. ಸುಲಲಿತವಾಗಿ ಹರಿಯುವ ನದಿಯನ್ನು ನೋಡಿದರೆ ಯಾರಿಗೆ ಆನಂದವಾಗುವುದಿಲ್ಲ. ಆ ನೀರು ಸದಾ ಸಮಾಜಕ್ಕೆ ದೊರೆಯಲಿ ಎನ್ನುವುದೇ ನಮ್ಮಂತಹ ಮಿತ್ರರ ಹಾರೈಕೆಯಾಗಿರುತ್ತದೆ.

ಡಾ.ಅಶೋಕಗೋಧಿ ಅವರಂತಹ ಸ್ನೇಹಿತರನ್ನು ಪಡೆದಿರುವ ನನಗೆ ಹೆಮ್ಮೆ ಹಾಗೂ ಅಭಿಮಾನವೆನಿಸಿದೆ. ಅವರು ನೂರ್ಕಾಲ ಬಾಳಲಿ. ಅವರಿಂದ ಸಮಾಜಕ್ಕೆ ಮತ್ತಷ್ಟು ಕೊಡುಗೆ ಸಂದಾಯವಾಗಲೆಂದು ಶ್ರೀದುರ್ಗಾಂಬಿಕಾದೇವಿಯನ್ನು ಪ್ರಾರ್ಥಿಸುತ್ತೇನೆ.

■ ನಿರೂಪಣೆ: ಶ್ರೀವತ್ಸ

---

## ನಾಗಾಲ್ಯಾಂಡಿನ ಹಿರಿಯ ಅಧಿಕಾರಿಗಳು ನಮ್ಮ ಸಂಸ್ಥೆಗೆ ಭೇಟಿಯನ್ನು ಕೊಟ್ಟಾಗ



ನಾಗಾಲ್ಯಾಂಡ್ ಸರ್ಕಾರದ ಅಧಿಕಾರಿಗಳಾದ ಡಾ. ಅಲೇನಾ ಐರ್ ಮತ್ತು ಕು. ಯೆಸಿಫಿ ಅವರು ಕಾರ್ಯನಿಮಿತ್ತವಾಗಿ ನಮ್ಮ ಸಂಸ್ಥೆಗೆ ಸೆಪ್ಟೆಂಬರ್ 12 ರಂದು ಭೇಟಿಯನ್ನು ನೀಡಿದ್ದರು. ನಮ್ಮ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು ಅವರಿಬ್ಬರನ್ನೂ ಸ್ವಾಗತಿಸಿ ಅವರಿಗೆ ಸನ್ಮಾನವನ್ನು ಮಾಡಿದರು.

## ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿಗೆ ಎಸ್.ಸಿ.ಸಿ.ಐ ಕಂಪನಿಯ ಮುಖ್ಯಾಧಿಕಾರಿಯ ಭೇಟಿ

ತುಮಕೂರಿನ ಅಂತರಸನ ಹಳ್ಳಿಯಲ್ಲಿರುವ ಜಪಾನಿನ ಸಾಫ್ಟ್‌ವೇರ್ ಕಂಪನಿಯಾದ 'ಸಿಸ್ಟಮ್ ಕನ್ಸಲ್ಟಂಟ್ ಇನ್ಫರ್ಮೇಷನ್ ಇಂಡಿಯಾ (ಪ್ರೈ) ಲಿಮಿಟೆಡ್‌ನ (ಎಸ್.ಸಿ.ಐ.ಐ.) ಹೊಸ ಮುಖ್ಯಾಧಿಕಾರಿ ಆದ ಶ್ರೀ ಕುಬೊಕಿ ರೈಯೊಸುಕೆ ಅವರು ಹಿಂದಿನ ಮುಖ್ಯಾಧಿಕಾರಿಯಾಗಿದ್ದ ಶ್ರೀ ಅಲೆಕ್ಸಾಂಡರ್ ವಾರ್ಕೆ ಅವರ ಸಂಗಡ ನಮ್ಮ ಶ್ರೀದೇವಿ ವಿದ್ಯಾಸಂಸ್ಥೆಗೆ 2024ರ ಸೆಪ್ಟೆಂಬರ್ 9ರಂದು ಭೇಟಿಯನ್ನು ನೀಡಿದ್ದರು. ನಮ್ಮ ಸಂಸ್ಥೆಯು ಎಸ್.ಸಿ.ಐ.ಐ.ಯೊಂದಿಗೆ 2008ರಿಂದಲೂ ಉತ್ತಮ ಸಂಬಂಧವನ್ನು ಹೊಂದಿದ್ದು, ನಮ್ಮ ವಿದ್ಯಾರ್ಥಿಗಳಿಗೆ ತರಬೇತಿ, ಉದ್ಯೋಗಪೂರ್ವ ತರಬೇತಿಗೆ ಅಗತ್ಯವಾದ ಯೋಜನೆಗಳು, ಕೈಗಾರಿಕಾ ಭೇಟಿ, ಪರಿಣತಿಯ ಬಗೆಗೆ ಮಾತುಕತೆ, ಉದ್ಯೋಗಾವಕಾಶ ಮೊದಲಾದವುಗಳ ವಿಷಯಗಳಲ್ಲಿ ತಮ್ಮ ಬೆಂಬಲವನ್ನು ನೀಡುತ್ತಾ ಬಂದಿದೆ.

2017ರಲ್ಲಿ ಶ್ರೀ ಅಲೆಕ್ಸಾಂಡರ್ ವಾರ್ಕೆ ಅವರು ನಮ್ಮ ಸಂಸ್ಥೆಯ ಆಡಳಿತ ಸಮಿತಿಯ ಸದಸ್ಯರಾಗಿದ್ದರು ಮತ್ತು ಈ ಸಮಿತಿಯ ಹಲವಾರು ಸಭೆಗಳಲ್ಲಿ ಭಾಗವಹಿಸಿ ಮೌಲ್ಯಯುತವಾದ ಸಲಹೆಗಳನ್ನು ನೀಡಿದ್ದರು. ನಮ್ಮ ಸಂಸ್ಥೆಯ ಸಂಪ್ರದಾಯದಂತೆ, ನಮ್ಮ ಸಂಸ್ಥೆಯ ಅಧ್ಯಕ್ಷರು ಎಸ್.ಸಿ.ಐ.ಐ.ಯ ಎಲ್ಲಾ ಅಧಿಕಾರಿಗಳನ್ನೂ ಅಭಿನಂದಿಸಿದರು ಮತ್ತು ಮಾಜಿ ಮುಖ್ಯಾಧಿಕಾರಿಯವರಿಗೆ, ನಿರಂತರವಾಗಿ ಅವರು ನೀಡಿದ ಬೆಂಬಲಕ್ಕಾಗಿ, ಕೃತಜ್ಞತೆಗಳನ್ನು ಸಲ್ಲಿಸಿದರು.



ಸಂಸ್ಥೆಯ ನಿರ್ದೇಶಕರಾದ ಎಂ.ಎಸ್. ಪಾಟೀಲ್ ಅವರು, ಬೆಂಗಳೂರು ವಿಶ್ವವಿದ್ಯಾನಿಲಯದ ಮಾಜು ಉಪಕುಲಪತಿ ಡಾ. ತಿಮ್ಮೇಗೌಡ ಅವರು ಹಾಗು ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರ ವಿಶ್ವನಾಥ್ ಅವರು ಈ ಸಂದರ್ಭದಲ್ಲಿ ಉಪಸ್ಥಿತರಾಗಿದ್ದರು.

ಹೊಸ ಮುಖ್ಯಾಧಿಕಾರಿ ಶ್ರೀ ಕುಬೊಕಿ ರೈಯೊಸುಕೆ ಅವರು ತಮ್ಮ ಕಂಪನಿಯು ನಮ್ಮ ಸಂಸ್ಥೆಗೆ ಬೆಂಬಲವನ್ನು ಮುಂದುವರಿಸಿಕೊಂಡು ಹೋಗುತ್ತದೆ ಎಂಬ ಆಶ್ವಾಸನೆಯನ್ನು ನೀಡಿದರು.

# ಶಾರದೆಯ ಮಂದಿರದ ಯೋಗಮಂದಿರಕ್ಕೆ ಬೆಳ್ಳಿಹಬ್ಬದ ಸಂಭ್ರಮ

■ ಕೆ.ಎಸ್. ರಾಜಮನ್ನಾರ್
ಹಿರಿಯ ಪತ್ರಕರ್ತರು

ತುಮಕೂರು –ಸಿರಾ ರಸ್ತೆಯಲ್ಲಿನ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಯ ಆವರಣದೊಳಗೆ ಕಾಲಿಟ್ಟರೆ ಸಾಕು ಶಾರದೆಯಮಂದಿರಕ್ಕೆ ಬಂದಿದ್ದೇವೆ ಎಂಬ ಭಾವನೆ ವಿದ್ಯಾರ್ಥಿಗಳಲ್ಲಿ ಮಾತ್ರವಲ್ಲದೆ ಪ್ರತಿಯೊಬ್ಬರ ಮನದಾಳದಲ್ಲಿ ಪುಟಿದೇಳುವುದು ಸ್ವಾಭಾವಿಕ. ಸಾವಿರಾರು ಮಕ್ಕಳ ಕಲರವ ತಾಣದಲ್ಲಿ ವಿದ್ಯಾಮಂದಿರವಿದೆ– ಯೋಗಮಂದಿರವಿದೆ. ಅದಕ್ಕೆ ಈಗ ಬೆಳ್ಳಿ ಹಬ್ಬದ ಸಂಭ್ರಮ.

ಇಲ್ಲಿ ಒಂದರಿಂದ 10ನೇ ತರಗತಿ ಮಕ್ಕಳಿಗೆ ಶಾಸ್ತ್ರಬದ್ಧವಾಗಿ ಯೋಗ ಕಲಿಸಲಾಗುತ್ತಿದೆ. ಮಕ್ಕಳು ಸಹ ಅಷ್ಟೇ ಆಸಕ್ತಿಯಿಂದ ಕಲಿಯುತ್ತಿದ್ದಾರೆ. ಪೋಷಕರು ಕಾಳಜಿಯಿಂದಲೇ ಮಕ್ಕಳನ್ನು ಕಳಿಸುತ್ತಿದ್ದಾರೆ. ಕಾಲೇಜು ಆಡಳಿತ ಮಂಡಳಿ ಸೂಕ್ತ ಸೌಲಭ್ಯ, ಒತ್ತಾಸೆ ನೀಡುತ್ತಿದೆ. ಯೋಗ ಮಂದಿರದಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು (1 ರಿಂದ 10ನೇ ತರಗತಿವರೆಗೆ) ಪ್ರತಿನಿತ್ಯ ಒಂದು ತಾಸು ಯೋಗ ಅಭ್ಯಾಸ ಮಾಡುತ್ತಿದ್ದಾರೆ. 2000–2001 ರಲ್ಲಿ ಆರಂಭವಾದ ಯೋಗ ಮಂದಿರಕ್ಕೆ ಈಗ 25 ವರ್ಷಕ್ಕೆ ಕಾಲಿಡುತ್ತಿದೆ.

153 ಬಾಲಕರು 155 ಬಾಲಕಿಯರು ಸೇರಿದಂತೆ 300ಕ್ಕೂ ಹೆಚ್ಚು ಮಕ್ಕಳು ಶಿಸ್ತುಬದ್ಧವಾಗಿ ಯೋಗ ಕಲಿಯುತ್ತಿದ್ದಾರೆ. ಆರೋಗ್ಯ ಸುಧಾರಣೆಗಾಗಿ ಜನರು ವಿಧಿಯಲ್ಲದೆ ಸಾಲ–ಸೋಲ ಮಾಡಿ ಮನೆ ಮಾರಿಯಾದರು ತಾಳಿ ಅಡವಿಟ್ಟು ಆಸ್ಪತ್ರೆಗಳಿಗೆ ಚೀಲಗಟ್ಟಲೆ ಹಣ ಸುರಿಯುವಂತಹ ಘೋರ ಘಟನಾವಳಿಗಳನ್ನು ನಿತ್ಯದ ಬದುಕಿನಲ್ಲಿ ಕಾಣುತ್ತಿದ್ದೇವೆ. ಕೇಳುತ್ತಿದ್ದೇವೆ.


ಯೋಗಮಂದಿರದ ಮುಖ್ಯ ಶಿಕ್ಷಕ ಲಕ್ಷ್ಮೀನಾರಾಯಣ್


"ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ. ಸೋಮಾರಿತನ ಬಿಟ್ಟು ಆರೋಗ್ಯದ ಕಡೆ ಗಮನಕೊಟ್ಟರೆ ಮತ್ತು ಇದಕ್ಕಾಗಿ ಪ್ರತಿನಿತ್ಯ ಒಂದು ತಾಸು ಮೀಸಲಿಟ್ಟರೆ ಅನಾರೋಗ್ಯದ ಸಮಸ್ಯೆಯಿಂದ ಪಾರಾಗಬಹುದು" ಎಂದು ಯೋಗಮಂದಿರದ ಮುಖ್ಯ ಶಿಕ್ಷಕ ಲಕ್ಷ್ಮೀನಾರಾಯಣ್ ಹಾಗೂ ಸಹಾಯಕ ಶಿಕ್ಷಕ ಆರ್. ವಿಜಯ್ ಕುಮಾರ್ ಅಭಿಪ್ರಾಯ ಪಡುತ್ತಾರೆ.

ಪ್ರತಿ ವರ್ಷ ಜೂನ್ 21ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಂದು ಶಾಲೆಯ ಯೋಗಮಂದಿರದ ಆವರಣದಲ್ಲಿ ಎರಡು ಗಂಟೆಗಳ ವಿಶೇಷ ಪ್ರದರ್ಶನ ನಡೆಸಲಾಗುತ್ತಿದೆ. ಯೋಗಮಂದಿರ, ಯೋಗಕಲಿಕಾ ಕೇಂದ್ರಗಳು ಹೆಚ್ಚಾದರೆ ಆಸ್ಪತ್ರೆಗಳಿಗೆ ಅಲೆದಾಡುವಂತಹ ಪ್ರಸಂಗವೇ ಬರುವುದಿಲ್ಲ ಎಂದು ತಮ್ಮ ಅನುಭವದ ಮಾತನ್ನು ಒತ್ತಿ ಹೇಳಿದ್ದಾರೆ. ಕಳೆದ 39 ವರ್ಷಗಳಿಂದಲೂ ಯೋಗ ಮಂದಿರದ ಮುಖ್ಯ ಶಿಕ್ಷಕರಾಗಿ ಲಕ್ಷ್ಮೀ ನಾರಾಯಣ್ ಕೆಲಸ ಮಾಡುತ್ತಿದ್ದಾರೆ. ಈವರೆಗೆ ಲಕ್ಷಾಂತರ ಮಕ್ಕಳಿಗೆ ತರಬೇತಿ ನೀಡಿದ್ದಾರೆ. ಅವರಿಂದ ಯೋಗ ಕಲಿತವರು ಇಂದು ದೇಶದ ಒಳಗೆ, ದೇಶದ ಹೊರಗೆ ಉನ್ನತ ಸ್ಥಾನ ಅಲಂಕರಿಸಿ ಸಂಸ್ಥೆಯ ಕೀರ್ತಿ ಘನತೆ ಹೆಚ್ಚಿಸಿದ್ದಾರೆ.

ಯೋಗ ಕಲೆ ಮತ್ತು ವಿಜ್ಞಾನ ಎರಡು ಆಗಿದ್ದು, ಸಾರ್ವತ್ರಿಕ ಪ್ರಜ್ಞೆಯೊಂದಿಗೆ ವೈಯಕ್ತಿಕ ಪ್ರಜ್ಞೆಯ ಒಟ್ಟುಗೂಡಿಸುವಿಕೆಗೆ ನಿಕಟ ಸಂಬಂಧ ಹೊಂದಿದೆ. ಯೋಗ ಮತ್ತು ಭಗವದ್ಗೀತೆಯ ಪ್ರಭಾವ ಹಾಗೂ ಪರಿಣಾಮ ಕೇವಲ ಹಿಂದೂಗಳು, ಭರತಖಂಡಕ್ಕೆ ಮಾತ್ರವಲ್ಲದೆ ಜಗತ್ತಿನಾದ್ಯಂತ ಪ್ರಭಾವಬೀರಿದೆ.

ಯೋಗಕ್ಕೆ ಮಾನ್ಯತೆ ನೀಡಬೇಕೆಂಬ ಭಾರತದ ಪ್ರಸ್ತಾವಕ್ಕೆ ವಿಶ್ವಸಂಸ್ಥೆಯು 2014ರಲ್ಲಿ ಒಪ್ಪಿಗೆ ನೀಡಿ, ಪ್ರತಿವರ್ಷ ಜೂನ್ 21ನೇ ದಿನಾಂಕವನ್ನು "ಅಂತಾರಾಷ್ಟ್ರೀಯ ಯೋಗ ದಿನಾಚರಣೆ" ಎಂದು ಘೋಷಿಸಿದ ಮೇಲೆ ಯೋಗ ಪ್ರಪಂಚದಾದ್ಯಂತ ಜನಪ್ರಿಯವಾಗಿದೆ. ಯೋಗದಿಂದ ಮಿದುಳಿನ ಮೇಲೆ ಉಂಟುಮಾಡುವ ಪರಿಣಾಮದಿಂದಾಗಿ ವ್ಯಕ್ತಿಯ ಸಂವೇದನಾಶೀಲತೆ ಹೆಚ್ಚಾಗಲಿದೆ.

ಇದರಿಂದ ನಕಾರಾತ್ಮಕ ಭಾವನೆ ಕಡಿಮೆಯಾಗುತ್ತವೆ ಎಂಬುದು ಅನೇಕ ಅಧ್ಯಯನಗಳಿಂದ ಖಚಿತಪಟ್ಟಿದೆ. ಖಿನ್ನತೆ, ಭೀತಿ, ನಿದ್ರಾಹೀನತೆಗಳನ್ನು ನಿವಾರಿಸಿ ಜೀವನ ಗುಣಮಟ್ಟ ಹೆಚ್ಚಿಸಲು ಪೂರಕ. ಇದರ ಬಗ್ಗೆ ಅಮೆರಿಕದ ಪ್ರತಿಷ್ಠಿತ 'ಅಮೆರಿಕನ್ ಮೆಡಿಕಲ್ ಅಸೋಸಿಯೇಷನ್ ಸೈಕಿಯಾಟ್ರಿ' ನಿಯತಕಾಲಿಕದಲ್ಲೂ ಅಧ್ಯಯನ ವರದಿಗಳು ಪ್ರಕಟವಾಗಿರುವುದೇ ಯೋಗದಲ್ಲಿ ಎಂತಹ ದಿವ್ಯ ಶಕ್ತಿ ಅಡಗಿದೆ ಎಂಬುದಕ್ಕೆ ಸಾಕ್ಷಿ .




## ಹಠಯೋಗ

ಇದು ಯೋಗದ ಅತ್ಯಂತ ಹಳೆಯ ರೂಪಗಳಲ್ಲಿ ಒಂದಾಗಿದೆ, ಇದು ಆಸನಗಳು (ಭಂಗಿಗಳು) ಮತ್ತು ಪ್ರಾಣಾಯಾಮ (ಉಸಿರಾಟದ ವ್ಯಾಯಾಮ) ಅಭ್ಯಾಸವನ್ನು ಒಳಗೊಂಡಿರುತ್ತದೆ.



## ವಿನ್ಯಾಸ ಯೋಗ

ಮೂಲಭೂತವಾಗಿ ಉಸಿರಿನೊಂದಿಗೆ ಸಿಂಕ್ರೊನೈಸ್ ಮಾಡಿದ ಚಲನೆಯನ್ನು ಅರ್ಥೈಸುತ್ತದೆ ಮತ್ತು ಸೂರ್ಯ ನಮಸ್ಕಾರದ ಮೂಲಕ ಕ್ಷಿಪ್ರ ಹರಿವನ್ನು ಆಧರಿಸಿದ ಹುರುಪಿನ ಶೈಲಿಯಾಗಿದೆ.




## ಯಿನ್ ಯೋಗ

ಇದು ನಿಧಾನನಗತಿಯ ಶೈಲಿಯಾಗಿದ್ದು, ಇದರಲ್ಲಿ ಐದು ನಿಮಿಷಗಳು ಅಥವಾ ಅದಕ್ಕಿಂತ ಹೆಚ್ಚು ಕಾಲಭಂಗಿಗಳನ್ನು ಇರಿಸಲಾಗುತ್ತದೆ.




## ಪವರ್ ಯೋಗ



ಪವರ್ ಯೋಗವನ್ನು ಹುರುಪಿನ, ವಿನ್ಯಾಸ-ಶೈಲಿಯ ಯೋಗ ಎಂದು ವಿವರಿಸಲಾಗಿದೆ. ಪವರ್ ಯೋಗದ ಜನಪ್ರಿಯತೆ ಪ್ರಪಂಚದಾದ್ಯಂತ ಹರಡಿದೆ ಮತ್ತು ಈಗ ಎಲ್ಲೆಡೆ ಕಲಿಸಲಾಗುತ್ತದೆ..


## ಜೀವಮುಕ್ತಿ ಯೋಗ

ಈ ಯೋಗದ ಶೈಲಿಯನ್ನು 1984 ರಲ್ಲಿ ರಚಿಸಲಾಯಿತು. ಈ ಶೈಲಿಯಲ್ಲಿ ಪಠಣ, ಧ್ಯಾನ, ಓದುವಿಕೆ ಮತ್ತು ದೃಢೀಕರಣಗಳನ್ನು ಮಾಡಲಾಗುತ್ತದೆ.



## ಅಯ್ಯಂಗಾರ್ ಯೋಗ

ಪ್ರತಿ ಆಸನದೊಳಗೆ ನಿಖರವಾದ ಮಸ್ಕ್ಯುಲೋಸ್ಕೆಲಿಟಲ್ ಜೋಡಣೆಯ ಬಗ್ಗೆ ಹೆಚ್ಚು ಗಮನ ಹರಿಸುವ ಪ್ರಯತ್ನದಲ್ಲಿ ಈ ರೀತಿಯ ಯೋಗದಲ್ಲಿ ಭಂಗಿಗಳನ್ನು ಹೆಚ್ಚು ಸಮಯ ಇರಿಸಲಾಗುತ್ತದೆ.




## ಅನುಸರ ಯೋಗ

ಎಲ್ಲಾ ಭಂಗಿಗಳಿಗೆ ಆಧಾರವಾಗಿರುವ ಯುನಿವರ್ಸಲ್ ಪ್ರಿನ್ಸಿಪಲ್ಸ್ ಆಫ್ ಅಲೈನ್ಮೆಂಟ್ ಅನ್ನು ಕಲಿಸುತ್ತದೆ, ಆದರೆ ಅನುಗ್ರಹದಿಂದ ಹರಿಯುವಂತೆ ಮತ್ತು ನಿಮ್ಮ ಹೃದಯವನ್ನು ಅನುಸರಿಸಲು ಪ್ರೋತ್ಸಾಹಿಸಲಿದೆ.



## ಬಿಕ್ರಮ ಯೋಗ

ಇದು ಇಪ್ಪತ್ತಾರು ಭಂಗಿಗಳು ಮತ್ತು ಎರಡು ಉಸಿರಾಟದ ತಂತ್ರಗಳನ್ನು ಒಳಗೊಂಡಿದೆ. ತೂಕವನ್ನು ನಿರ್ವಹಿಸುತ್ತದೆ ಮತ್ತು ಪ್ರದರ್ಶಕರು ಭಂಗಿಗಳಲ್ಲಿ ಹೆಚ್ಚು ಆಳವಾಗಿ ಚಲಿಸಲು ಅನುವು ಮಾಡಿಕೊಡುತ್ತದೆ.



## ಶಿವಾನಂದ ಯೋಗ

ಇದು ಸಾಮಾನ್ಯವಾಗಿ ಶವಾಸನ (ವಿಶ್ರಾಂತಿ ಭಂಗಿ), ಕಪಾಲಭಾತಿ ಮತ್ತು ಅನುಲೋಮ ವಿಲೋಮದಿಂದ ಪ್ರಾರಂಭವಾಗಲಿದೆ.



## ವಿನಿಯೋಗ

ವಿವಿಧ ವಿಧಾನಗಳು ಮತ್ತು ಅಭ್ಯಾಸದ ವಿಧಾನಗಳನ್ನು ವ್ಯಕ್ತಿಯ ವಿಶಿಷ್ಟ ಸ್ಥಿತಿ, ಅಗತ್ಯಗಳು ಮತ್ತು ಆಸಕ್ತಿಗಳಿಗೆ ಅಳವಡಿಸುತ್ತದೆ. ಈ ಶೈಲಿಯು ಸ್ವಯಂ-ಶೋಧನೆ ಮತ್ತು ವೈಯಕ್ತಿಕ ರೂಪಾಂತರಕ್ಕೆ ಸಹಾಯ ಮಾಡುತ್ತದೆ.



## ಕುಂಡಲಿನಿ ಯೋಗ


ಕುಂಡಲಿನಿಯು ಅನೇಕ ಚಲನೆಗಳು ಅಥವಾ ವ್ಯಾಯಾಮಗಳು, ಕ್ರಿಯಾತ್ಮಕ ಉಸಿರಾಟದ ಅಭ್ಯಾಸಗಳು, ಪಠಣ, ಧ್ಯಾನ ಮತ್ತು ಮಂತ್ರಗಳನ್ನು ಸಂಯೋಜಿಸುತ್ತದೆ.



## ನೆನಪಿನಲ್ಲಿಡಬೇಕಾದ ಮಾತು

“ ಜ್ಞಾನದಿಂದ ಬಾಂಬು ಹುಟ್ಟಿಸಬಹುದು. ಸಮುದ್ರ ಮಥನದಿಂದ ಹಾಲಾಹಲ(ವಿಷ) ಹುಟ್ಟಿಸಬಹುದು. ಜ್ಞಾನದಿಂದ ಗಾಳಿಯಲ್ಲಿ ಹಾರಾಡಬಹುದು. ಆದರೆ ಬಂದ ರೋಗಕ್ಕೆ ಔಷಧ ಕಂಡುಹಿಡಿಯುವುದು ಎಲ್ಲಕ್ಕಿಂತಲೂ ಜ್ಞಾನದ ಹೆಚ್ಚಿನ ಉಪಯೋಗ. ಅದು ಮನುಕುಲದ ನಿಜವಾದ ಸೇವೆ.

**ಪ್ರೊ. ಎ.ಎನ್. ಮೂರ್ತಿರಾವ್**
ಆಧುನಿಕ ಕನ್ನಡ ಸಾಹಿತ್ಯದ ಹೆಸರಾಂತ ಲೇಖಕರು
ದೇವರು ಮತ್ತು ದೇವರನ್ನು ಕುರಿತು ಕತೆಗಳು ಕೃತಿಯಿಂದ




# ಯೋಗದ ಮಹತ್ವ ಅರಿತ ಡಾ. ಎಂ.ಆರ್.ಹುಲಿನಾಯ್ಕರ್

ಯೋಗದ ಮಹತ್ವವನ್ನು ವೈದ್ಯರಾಗಿ, ಶ್ರೀದೇವಿ ಶಿಕ್ಷಣಸಂಸ್ಥೆಯ ಅಧ್ಯಕ್ಷರಾಗಿ ಡಾ.ಎಂ. ಆರ್. ಹುಲಿನಾಯ್ಕರ್ ಎಲ್ಲರಿಗಿಂತ ಮೊದಲು ಅರ್ಥಮಾಡಿಕೊಂಡಿದ್ದಾರೆ. ಅದರ ಪ್ರಯೋಜನ ಜನಸಾಮಾನ್ಯರಿಗೆ ತಲುಪಿಸಿದರೆ ಆರೋಗ್ಯಪೂರ್ಣ ಸಮಾಜ ಕಟ್ಟಬಹುದು ಎಂಬ ದೂರದೃಷ್ಠಿಯ ಚಿಂತನೆಯಿಂದ ತಮ್ಮ ಶಿಕ್ಷಣ ಸಂಸ್ಥೆಯಲ್ಲಿ ಯೋಗಶಿಕ್ಷಕರನ್ನು ನೇಮಿಸಿ ಮಕ್ಕಳ ಯೋಗ ಕಲಿಕೆಗೆ ಒತ್ತು ಕೊಟ್ಟಿದ್ದಾರೆ.

ಹಿಂದೆ ಆಫ್ರಿಕಾ ದೇಶಗಳ ಪ್ರವಾಸ ಮುಗಿಸಿ ದೇಶಕ್ಕೆ ಬಂದ ಸಂದರ್ಭದಲ್ಲಿ ಅವರಿಗೆ ನೆಗಡಿ, ಕೆಮ್ಮು, ಜ್ವರ ಕಾಣಿಸಿಕೊಂಡಿತ್ತು. ಎಲ್ಲಾ ರೀತಿಯ ವೈದ್ಯಕೀಯ ಪರೀಕ್ಷೆ ಮಾಡಿಸಿದರೂ ಸಮಸ್ಯೆಯ ಮೂಲ ಎಲ್ಲಿಯದು? ಕಾರಣವೇನು ಎಂಬುದು ಗೊತ್ತಾಗಲಿಲ್ಲ. ಸ್ವಲ್ಪ ದಿನಗಳ ನಂತರ ಜ್ವರ ಮೊದಲಾದ ಕಾಯಿಲೆಗಳು ನಿಯಂತ್ರಣಕ್ಕೆ ಬಂದವು. ಆದರೆ ಕಾಲನೋವು ಹೋಗಲಿಲ್ಲ. ಯಾವುದೇ ಚಿಕಿತ್ಸೆಗೆ ಅದು ಬಗ್ಗಲಿಲ್ಲ.

ಇದನ್ನು ಯೋಗದಿಂದ ಸಮಸ್ಯೆ ಬಗೆಹರಿಸಿಕೊಳ್ಳಬುದು ಎಂದು ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಮಿತ್ರರಾದ ಟಿ. ಆರ್. ನಾರಾಯಣಪ್ಪ ಹೇಳಿದರು. ಪ್ರಾರಂಭದಲ್ಲಿ ಅವರು ಡಾ. ಹುಲಿನಾಯ್ಕರ್ ಅವರಿಗೆ ಪ್ರಾಣಾಯಾಮ ಹೇಳಿಕೊಟ್ಟರು. ಡಾ. ಎಂ.ಆರ್.ಹುಲಿನಾಯ್ಕರ್ ಅವರಿಗೆ ಯೋಗದಲ್ಲಿದ್ದ ಆಸಕ್ತಿ ಕಂಡು ನಾರಾಯಣಪ್ಪ ಅವರು ಬೆಂಗಳೂರಿನ ವಿವೇಕಾನಂದ ಯೋಗ ಕೇಂದ್ರದಲ್ಲಿ ತರಬೇತಿ ಪಡೆದಿದ್ದ ಲಕ್ಷ್ಮೀನಾರಾಯಣ್ ಎಂಬುವರನ್ನು ಪರಿಚಯಿಸಿದರು. ಡಾ. ಹುಲಿನಾಯ್ಕರ್ ಬದುಕಿನಲ್ಲಿ ಯೋಗಾಸನಕ್ಕೆ ಪ್ರಥಮ ಆದ್ಯತೆ ದೊರೆಯಿತು. ಈ ಅಭ್ಯಾಸ ಈಗಲೂ ಮುಂದುವರೆದಿದೆ. ಕಾಲಕ್ರಮೇಣ ಅವರ ಕಾಲುನೋವು ಮರೆಯಾಯಿತು. ಸಾಮಾನ್ಯ ಆರೋಗ್ಯದಲ್ಲೂ ಸುಧಾರಣೆಯಾಯಿತು.




“ವೈದ್ಯನಾಗಿ ನನ್ನ ಅನಿಸಿಕೆ ಏನೆಂದರೆ ಆಫ್ರಿಕಾ ಪ್ರವಾಸದಲ್ಲಿ ನನಗೆ ಚಿಕನ್‌ಗುನ್ಯ ಕಾಯಿಲೆ ಬಂದಿರಬೇಕು. ಚಿಕನ್‌ಗುನ್ಯಾ ವಾಸಿಯಾದರೂ ಅದಕ್ಕೆ ತೆಗೆದುಕೊಂಡ ಔಷಧಗಳ ಅಡ್ಡ ಪರಿಣಾಮ ನಿವಾರಣೆಯಾಗಿರಲಿಲ್ಲ. ಅಡ್ಡ ಪರಿಣಾಮದ ಆರೋಗ್ಯ ಸಮಸ್ಯೆಯ ನಿವಾರಣೆಗೆ ಯೋಗ ಉತ್ತಮ ಸಾಧನವಾಯಿತು. ಸಾಮಾನ್ಯ ಆರೋಗ್ಯದಲ್ಲೂ ಸುಧಾರಣೆಯಾಯಿತು” ಎಂದು ಡಾ.ಎಂ. ಆರ್. ಹುಲಿನಾಯ್ಕರ್ ಅವರು ತಮ್ಮ ಆತ್ಮಕಥನ **‘ಅಂತರಂಗದ ಅವಲೋಕನ’** ಗ್ರಂಥದಲ್ಲಿ ಬರೆಯುತ್ತಾರೆ.

ಇಂದಿಗೂ ಯೋಗ ಅವರ ಜೀವನದ ಭಾಗವಾಗಿದೆ. ಯೋಗ ತರಬೇತಿ ಕೇಂದ್ರದ ಬೆಳ್ಳಿ ಹಬ್ಬದ ಶುಭ ಸಂದರ್ಭದಲ್ಲಿ ಸಾವಿರಾರು ಮಕ್ಕಳು ಯೋಗ ಕಲಿತು ಆರೋಗ್ಯವಂತರನ್ನಾಗಿರುವುದನ್ನು ಕಂಡಾಗ ಡಾ.ಎಂಆರ್.ಹುಲಿನಾಯ್ಕರ್ ಕಾರ್ಯದ ಬಗೆಗೆ ಹೆಮ್ಮೆ ಮೂಡುತ್ತದೆ. ವೈದ್ಯರಾಗಿ ಅವರು ಯಾವುದರಿಂದ ಜನರಿಗೆ ಹೆಚ್ಚು ಪ್ರಯೋಜನವೋ ಅದನ್ನು ಆಯ್ಕೆ ಮಾಡಿಕೊಳ್ಳುವ ಪೂರ್ವಗ್ರಹಪೀಡಿತವಲ್ಲದ ಮನಸ್ಸಿನವರು ಎಂಬುದನ್ನು ತಿಳಿದು, ಅವರ ಕುರಿತು ಹೆಮ್ಮೆ ಮೂಡುತ್ತದೆ.

## ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ

# ಪಾಲಿಟೆಕ್ನಿಕ್ ಡಿಪ್ಲೊಮಾ: ವೃತ್ತಿಪರರಿಗೆ ಭಾರಿ ಬೇಡಿಕೆ

ಜಗತ್ತು ವಿಜ್ಞಾನ–ತಂತ್ರಜ್ಞಾನದ ನವಯುಗಕ್ಕೆ ತೆರೆದುಕೊಂಡಿದೆ. ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ತಂತ್ರಜ್ಞಾನದ ಪ್ರಭಾವ, ಬಳಕೆ ಹೆಚ್ಚುತ್ತಿದೆ. ಹೀಗಾಗಿ ಇಂದಿನ ಅಗತ್ಯಕ್ಕೆ ಅನುಗುಣವಾಗಿ ತರಬೇತಿ, ಶಿಕ್ಷಣ ಬೇಕಿದೆ. ಪ್ರಾಯೋಗಿಕ ಮತ್ತುತಾಂತ್ರಿಕ ಶಿಕ್ಷಣದ ಅಗತ್ಯ ಹೆಚ್ಚಾಗುತ್ತಿದೆ. ಆಧುನಿಕ ಯಂತ್ರಗಳನ್ನು ತಯಾರಿಸಲು ಹಾಗೂ ನಿರ್ವಹಿಸಲು ವಿಶೇಷ ಮತ್ತು ನುರಿತ ಮಾನವ ಸಂಪನ್ಮೂಲ ಬೇಕಿದೆ. ಇದರ ಪರಿಣಾಮ ಇಂದು ತಾಂತ್ರಿಕ ಶಿಕ್ಷಣಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ. ಉದ್ಯೋಗ ಮಾರುಕಟ್ಟೆ ಸಹ ವಿಕಸನ ಗೊಳ್ಳುತ್ತಿದೆ.



ಪಾಲಿಟೆಕ್ನಿಕ್ ಕೋರ್ಸ್‌ಗಳು ಉದ್ಯೋಗ–ಆಧಾರಿತ ಕೋರ್ಸ್ ಎಂದೇ ಜನಪ್ರಿಯವಾಗಿವೆ. ಏಕೆಂದರೆ ನಿರ್ದಿಷ್ಟ ಕೈಗಾರಿಕೆಗಳು ಮತ್ತು ವೃತ್ತಿಗಳಿಗೆ ನೇರವಾಗಿ ಅನ್ವಯಿಸುವ ಹಾಗೂ ಪ್ರಾಯೋಗಿಕ ತರಬೇತಿಗಳನ್ನು ಈ ಕೋರ್ಸ್‌ಗಳು ನೀಡುತ್ತಿವೆ. ಹೆಚ್ಚು ಶ್ರಮವಿಲ್ಲದೆ ಉದ್ಯೋಗ ಪಡೆಯುವುದಕ್ಕೆ ಇವು ರಹದಾರಿಗಳಾಗಿವೆ ಎಂದರೂ ಅತಿಶಯೋಕ್ತಿಯೇನಲ್ಲ.!

ಎಸ್.ಎಸ್.ಎಲ್. ಸಿ. ಮತ್ತು ಪಿ.ಯು.ಸಿ.ಯ ಅನಂತರ ಮೂರು ವರ್ಷಗಳ ಪದವಿ ಕೋರ್ಸ್ ತದನಂತರ ಸ್ನಾತಕೋತ್ತರ ಪದವಿ ಮುಗಿಸಿ ಉದ್ಯೋಗಕ್ಕೆ ಸೇರಬೇಕಾದರೆ ಹೆಚ್ಚಿನ ಸಮಯ, ಹಣದ ಆವಶ್ಯಕತೆ ಬೇಕಾಗುತ್ತದೆ. ಬಹುತೇಕ ಪೋಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಇದನ್ನು ಪೂರೈಸಲು ಸಾಧ್ಯವಾಗದ ಕಾರಣ ಎಸ್.ಎಸ್. ಎಲ್.ಸಿ ಮತ್ತು ಪಿಯುಸಿ ನಂತರ ಉದ್ಯೋಗ ದೊರಕಬಹುದಾದ ಕೋರ್ಸ್‌ಗಳ ಕಡೆಗೆ ಅವರು ಹೆಚ್ಚು ಒಲವು ತೋರುತ್ತಿದ್ದಾರೆ. ಇಂದು ಕೌಶಲ್ಯ ಮತ್ತು ತರಬೇತಿ ಆಧಾರಿತ ಶಿಕ್ಷಣಕ್ಕೆ ಜಾಗತಿಕ ಬೇಡಿಕೆಯಿದೆ. ಇದು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸಕ್ಕೂ ಕಾರಣವಾಗಿದೆ.

ಪ್ರಸ್ತುತ ದೇಶದಲ್ಲಿ ಹೆಚ್ಚು ಉದ್ಯೋಗ–ಆಧಾರಿತ ಪಾಲಿಟೆಕ್ನಿಕ್ ಡಿಪ್ಲೊಮಾ ಕೋರ್ಸ್ಗಳ ಪೈಕಿ ಒಂದಾದ ಮೆಕ್ಯಾನಿಕಲ್ ವೃತ್ತಿಪರರಿಗೆ ಬಹಳ ಬೇಡಿಕೆಯಿದೆ. ತಂತ್ರಜ್ಞಾನದ ತ್ವರಿತ ಪ್ರಗತಿ ಮತ್ತು ಉದ್ಯಮಗಳಾದ್ಯಂತ ಡಿಜಿಟಲೀಕರಣ, ವ್ಯಾಪಾರ ಅಗತ್ಯ ಪೂರೈಸಲು, ನವೀನ ಮಾದರಿ– ವಿನ್ಯಾಸ – ಅಭಿವೃದ್ಧಿ ಪಡಿಸುವ ನುರಿತ ಮೆಕ್ಯಾನಿಕಲ್ ವೃತ್ತಿಪರ ಅವಶ್ಯಕತೆ ಬಹಳವಾಗಿದೆ. ಮೆಕ್ಯಾನಿಕಲ್ ಡಿಪ್ಲೊಮಾ ವೃತ್ತಿಪರರು ಮೆಷಿನ್ ಡಿಸೈನ್ ಮತ್ತು ಡೆವಲಪ್ಮೆಂಟ್, ಕ್ವಾಲಿಟಿಚೆಕಿಂಗ್ ಮತ್ತು ಆಟೋ ಸಿಎಡಿ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚು ಬೇಡಿಕೆಯಲ್ಲಿದೆ.

ಈ ಕೋರ್ಸಗಳಿಗೆ ಉದ್ಯೋಗ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆಯಿದೆ. ಪಾಲಿಟೆಕ್ನಿಕ್ ಕೋರ್ಸ್‌ಗಳು ಸಾಮಾನ್ಯವಾಗಿ ಇಂಟರ್ನ್ಶಿಪ್ ಅಥವಾ ಉದ್ಯೋಗಪೂರ್ವ ತರಬೇತಿಗಳನ್ನು ಒಳಕೊಂಡಿರುತ್ತವೆ. ವಿದ್ಯಾರ್ಥಿಗಳಿಗೆ ವಾಸ್ತವಿಕ ಜಗತ್ತಿನ ಅನುಭವ ಪಡೆಯಲು ಮತ್ತು ಪದವಿಯ ಅನಂತರ ಉದ್ಯೋಗ ಖಾತರಿ ಪಡಿಸಿಕೊಳ್ಳಲು ನೆರವು ನೀಡಲಿದೆ.

ಒಟ್ಟಾರೆಯಾಗಿ, ವಿದ್ಯಾರ್ಥಿಗಳನ್ನು ನಿರ್ದಿಷ್ಟ ವೃತ್ತಿಗೆ ತಯಾರು ಮಾಡಲು ಹಾಗೂ ಉದ್ಯೋಗಿಗಳಾಗಲು ಅವರಿಗೆ ಬೇಕಾದ ಕೌಶಲ ಮತ್ತು ಜ್ಞಾನವನ್ನು ಒದಗಿಸಲೆಂದೇ ಪಾಲಿಟೆಕ್ನಿಕ್ ಕೋರ್ಸ್‌ಗಳನ್ನ ರೂಪಿಸಲಾಗಿದೆ. ಹೀಗಾಗಿ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ವಿವಿಧ ಉದ್ಯಮಗಳಲ್ಲಿ ಉದ್ಯೋಗದ ಅವಕಾಶಗಳು ತೆರೆದುಕೊಳ್ಳುತ್ತಿವೆ.

ರಾಜಧಾನಿಗೆ ಕೂಗಳತೆಯ ದೂರದಲ್ಲಿರುವ ತುಮಕೂರುರಾಜ್ಯದ ವಿದ್ಯಾರಂಗದಲ್ಲಿನ ಕಾಶಿಯೆಂದೇ ಹೆಸರುವಾಸಿಯಾಗಿದೆ. ತುಮಕೂರಿನ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳು ಇಂದಿನ ಅಗತ್ಯ ಶಿಕ್ಷಣ ನೀಡುವಲ್ಲಿ ಪ್ರಾಮುಖ್ಯವನ್ನು ಗಳಿಸಿಕೊಂಡಿದೆ. ಈ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಅಗತ್ಯವಾಗಿ ಬೇಕಾದ ಮೂಲಸೌಲಭ್ಯಗಳು, ಪ್ರಯೋಗಾಲಯಗಳು ಹಾಗೂ ನುರಿತ ಅನುಭವಿ ಬೋಧಕ ಸಿಬ್ಬಂದಿ, ಉತ್ತಮ ಶೈಕ್ಷಣಿಕ ಕ್ಯಾಂಪಸ್ ಪರಿಸರವನ್ನು ಒಳಕೊಂಡಿದ್ದು, ಇಲ್ಲಿ, ಎರಡು ಅಥವಾ ಮೂರು ವರ್ಷಗಳ ಡಿಪ್ಲೊಮೊ ಕೋರ್ಸ್‌ಗಳಿಗೆ ಹೇರಳ ಅವಕಾಶವನ್ನು ಕಲ್ಪಿಸಿವೆ. ಕೋರ್ಸ್ ಮುಗಿಸಿ ಹೊರಹೋಗುವ ವಿದ್ಯಾರ್ಥಿಗಳಿಗೆ ಶೇ 100 ಉದ್ಯೋಗಾವಕಾಶಗಳು (ಪ್ಲೇಸ್‌ಮೆಂಟ್) ದೊರೆಯುವಂತೆ ಮಾಡಲಾಗುತ್ತಿದೆ ಎಂದು ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜು ಪ್ರಾಂಶುಪಾಲ ಡಾ. ಬಿ.ಎಸ್. ಲೋಕೇಶ್ ಹೇಳುತ್ತಾರೆ.

2023–24ನೇ ಸಾಲಿನಲ್ಲಿ ಶೇ ನೂರಕ್ಕೆ ನೂರರಷ್ಟು ಫಲಿತಾಂಶ ಬಂದಿದ್ದು, ಎಲ್ಲರಿಗೂ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಲಾಗಿದೆ. ಪಾಲಿಟೆಕ್ನಿಕ್ ಕೋರ್ಸ್ ಮುಗಿಸಿದ ವಿದ್ಯಾರ್ಥಿಗಳು ತುಮಕೂರು ಹಾಗೂ ಬೆಂಗಳೂರು ಸುತ್ತಮುತ್ತಲಿನ ಕೈಗಾರಿಕೆಗಳಲ್ಲಿ ಹಾಗೂ ಬೆಂಗಳೂರಿನ ಹೆಚ್‌ಎಎಲ್ ಹಾಗೂ ಎನ್‌ಎಎಲ್, ಬೆಸ್ಕಾಂ, ನಮ್ಮ ಮೆಟ್ರೋ ಮುಂತಾದ ಸಂಸ್ಥೆಗಳಲ್ಲಿ ಉದ್ಯೋಗ ಪಡೆದುಕೊಳ್ಳುತ್ತಿದ್ದಾರೆ.



ಇಲ್ಲಿಂದ ಹೊರಹೋಗುವ ವಿದ್ಯಾರ್ಥಿಗಳು ಸಂದರ್ಶನವನ್ನು ಯಾವರೀತಿ ಎದುರಿಸಬೇಕು. ಉದ್ಯೋಗದಾತರೊಂದಿಗೆ ಯಾವ ರೀತಿ ವ್ಯವಹರಿಸಬೇಕು ಎಂಬುದನ್ನು ಕೂಡ ತರಗತಿಗಳಲ್ಲಿ ಕಲಿಸಿ ಕೊಡಲಾಗುತ್ತದೆ. ಹೀಗಾಗಿ ಇಲ್ಲಿಂದ ಹೊರಬರುವ ವಿದ್ಯಾರ್ಥಿಗಳಿಗೆ ಭವಿಷ್ಯ ರೂಪಿಸಿಕೊಳ್ಳಲು ಪೂರಕ ಪರಿಸರ ಹಾಗೂ ಅವಕಾಶಗಳನ್ನು ಇಲ್ಲಿ ಕಲ್ಪಿಸಲಾಗಿದೆ.

**ತಾಂತ್ರಿಕ ಉದ್ಯೋಗ:** ಪಾಲಿಟೆಕ್ನಿಕ್ ಡಿಪ್ಲೊಮಾ ವಿದ್ಯಾರ್ಥಿಗಳು ಎಂಜಿನಿಯರಿಂಗ್, ಉತ್ಪಾದನೆ, ನಿರ್ಮಾಣ ಮತ್ತು ಮಾಹಿತಿ ತಂತ್ರಜ್ಞಾನದಂತಹ ಉದ್ಯಮಗಳಲ್ಲಿ ತಾಂತ್ರಿಕ ಉದ್ಯೋಗಗಳನ್ನು ಪಡೆಯಬಹುದು.

**ಹೆಚ್ಚಿನ ಶಿಕ್ಷಣ:** ಪಾಲಿಟೆಕ್ನಿಕ್ ಡಿಪ್ಲೊಮಾ ವಿದ್ಯಾರ್ಥಿಗಳು ಸಂಬಂಧಿತ ಕ್ಷೇತ್ರಗಳಲ್ಲಿ ಸ್ನಾತಕೋತ್ತರ ಪದವಿಕೋರ್ಸ್‌ಗಳ ವ್ಯಾಸಂಗದ ಮೂಲಕ ಉನ್ನತ ಶಿಕ್ಷಣ ಮುಂದುವರಿಸಬಹುದು. ಪಾಲಿಟೆಕ್ನಿಕ್‌ಡಿಪ್ಲೊಮಾ ಹೊಂದಿರುವವರಿಗೆ. ಅನೇಕ ವಿಶ್ವವಿದ್ಯಾನಿಲಯಗಳು, ಲ್ಯಾಟರಲ್‌ಎಂಟ್ರಿ ಮೂಲಕ ಅತ್ಯಲ್ಪ ಅವಧಿಯಲ್ಲಿ ಇಂಜಿನಿಯರಿಂಗ್ ಪದವಿ ಪಡೆದುಉದ್ಯೋಗ, ಹೆಚ್ಚಿನ ವೇತನ ಹಾಗೂ ಸ್ಥಾನಮಾನಗಳನ್ನು ಗಳಿಸಬಹುದು.

**ವಾಣಿಜ್ಯೋದ್ಯಮ:** ಪಾಲಿಟೆಕ್ನಿಕ್ ಡಿಪ್ಲೊಮಾ ವಿದ್ಯಾರ್ಥಿಗಳು ತಮ್ಮ ಸ್ವಂತ ಉದ್ಯಮ–ವ್ಯವಹಾರಗಳನ್ನು ಪ್ರಾರಂಭಿಸ ಬಹುದು ಅಥವಾ ಆಯ್ಕೆ ಮಾಡಿಕೊಂಡ ಕ್ಷೇತ್ರದಲ್ಲಿ ಸ್ವತಂತ್ರವಾಗಿ ಕೆಲಸ ಮಾಡಬಹುದು. ಗ್ರಾಹಕರು ಮತ್ತು ಗ್ರಾಹಕ ಸೇವೆಗಳು ಅಥವಾ ಉತ್ಪನ್ನಗಳ ತಯಾರಿಕೆಗೆ ತಮ್ಮ ತಾಂತ್ರಿಕ ಕೌಶಲ್ಯ ಮತ್ತು ಜ್ಞಾನಗಳನ್ನು ಬಳಸಬಹುದು. ಒಟ್ಟಾರೆಯಾಗಿ, ಪಾಲಿಟೆಕ್ನಿಕ್ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ವಿವಿಧ ಕೈಗಾರಿಕಾ ವಲಯದಲ್ಲಿ ಉತ್ತಮ ಅವಕಾಶಗಳು ಲಭ್ಯವಿರುವುದರಿಂದ ಆಯ್ಕೆ ಮಾಡಿಕೊಂಡ ಕ್ಷೇತ್ರದಲ್ಲಿ ಬದುಕು – ಭವಿಷ್ಯವನ್ನು ಕಟ್ಟಿಕೊಳ್ಳಬಹುದಾಗಿದೆ.

**▪ ನಿರೂಪಣೆ: ಕೆ.ಎಸ್. ರಾಜಮನ್ನಾರ್**
**ಹಿರಿಯ ಪತ್ರಕರ್ತರು**

## ಎನ್. ಐ. ಸಿ.ಯು ಕಾರ್ಯಾಚರಣೆ

# ನವಜಾತ ಶಿಶುಗಳ ಪಾಲನೆ- ಪೋಷಣೆ



■ ಕೆ.ಎಸ್. ರಾಜಮನ್ನಾರ್
ಹಿರಿಯ ಪತ್ರಕರ್ತರು

ದೇಶದಲ್ಲಿ ವಾರ್ಷಿಕವಾಗಿ ಸುಮಾರು 35ಲಕ್ಷ ನವಜಾತ ಶಿಶುಗಳು ಅವಧಿಗೆ ಮೊದಲೇ ಅಂದರೆ 9 ತಿಂಗಳು 7 ದಿನಕ್ಕೆ ಮೊದಲೇ ಜನಿಸುತ್ತವೆ. ಇಂತಹ ಮಕ್ಕಳ ಜೀವ ಉಳಿಸುವುದು ಪಾಲನೆ– ಪೋಷಣೆ ವೈದ್ಯಕೀಯ ಲೋಕಕ್ಕೆ ದೊಡ್ಡ ಸವಾಲಿನ ಕೆಲಸ.

ತಾಯಂದಿರ ಮರಣಗಳಲ್ಲಿ ಶೇಕಡ46, ನವಜಾತ ಶಿಶುಗಳ ಪೈಕಿ ಶೇಕಡ 40 ರಷ್ಟು ಹೆರಿಗೆಯ ಸಮಯದಲ್ಲಿ ಅಥವಾ ಜನನದ ನಂತರದ ಮೊದಲ 24 ಗಂಟೆಗಳಲ್ಲಿ ಸಂಭವಿಸುತ್ತಿದೆ. ಹೀಗಾಗಿ ತಾಯಿ ಮತ್ತು ಮಗುವಿನ ರಕ್ಷಣೆಯೂ ಬಹಳ ಮುಖ್ಯವಾಗಿದೆ. 29 ದಿನಗಳಿಗಿಂತ ಕಡಿಮೆ ದಿನಗಳ ನವಜಾತ ಶಿಶುಗಳ ನಿಧನಕ್ಕೆ ದೇಹದ ಬಹುಪಾಲು ಅಂಗಾಂಗಳು ಸರಿಯಾಗಿ, ಸಹಜವಾಗಿ ಬೆಳವಣಿಗೆಯಾಗದಿರುವುದೇ ಮುಖ್ಯ ಕಾರಣ. ಅವಧಿ ಪೂರ್ವದಲ್ಲಿ (ಪ್ರಿಮೆಚೂರ್) ಜನಿಸಿದ ನವಜಾತ ಶಿಶುಗಳನ್ನು ಹಾಗೂ ಹುಟ್ಟಿದಾಗ ಕೆಲವು ಆರೋಗ್ಯ ಸಮಸ್ಯೆ ಕಾಣಿಸಿಕೊಂಡ ಶಿಶುಗಳನ್ನು ತೀವ್ರ ತುರ್ತು ನಿಗಾ ಘಟಕದಲ್ಲಿ(ಎನ್‌ಐಸಿಯು) ಪೋಷಿಸಲಾಗುತ್ತಿದೆ. ಈ ಘಟಕಗಳು ಹೇಗೆ ಕೆಲಸ ಮಾಡುತ್ತವೆ. ಅಲ್ಲಿನ ವೈದ್ಯರು– ದಾದಿಯರು ಇತರೆ ಅರೆವೈದ್ಯಕೀಯ ಸಿಬ್ಬಂದಿ ಹಸುಗೂಸುಗಳನ್ನು ಹೇಗೆ ಕಾಪಾಡುತ್ತಾರೆ ಎಂಬುದನ್ನು ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನ ಎನ್.ಐ.ಸಿಯು ಘಟಕದ ಮುಖ್ಯಸ್ಥ ಡಾ.ಮಧುಚಂದ್ರ ವಿವರಿಸಿದ್ದಾರೆ.

ಕಡಿಮೆ ತೂಕ, ಹಾಲು ಕುಡಿಯದಿರುವುದು ಉಸಿರುಕಟ್ಟುವಿಕೆ ಮತ್ತು ಹುಟ್ಟಿದಾಗ ಮಗು ಅಳದೆಯಿರುವುದು ಮೆದುಳಿನ ರಸ್ತಸ್ರಾವ, ಕರುಳು ಮತ್ತು ಶ್ವಾಸಕೋಶ, ಹೃದಯದ ಸೋಂಕು ನ್ಯುಮೋನಿಯಾ ಮುಂತಾದ ಹಲವು ಸಮಸ್ಯೆಗಳು ಭಾದಿಸಲಿದ್ದು ಇಂತಹ ಮಕ್ಕಳನ್ನು ಎನ್ ಐಸಿಯು ನಲ್ಲಿಟ್ಟು ಕಾಪಾಡಿ ನಂತರ ತಾಯಿ ಮಡಿಲಿಗೆ ಸೇರಿಸುವುದು ಸುಲಭದ ಮಾತಲ್ಲ.ಇದು ವೈದ್ಯಕೀಯ ವೃತ್ತಿಗೆ ಸವಾಲಿನ ಕೆಲಸ. ಅವರಿಗೆ ಪೂರ್ವ ಹುಟ್ಟಿದ ಮಕ್ಕಳಲ್ಲಿ ಎಲ್ಲಾ ಅಂಗಾಂಗಗಳು ಸಹಜವಾಗಿ ಬೆಳೆಯದಿರುವ ಕಾರಣ ಅಂತಹ ಮಕ್ಕಳ ಆರೋಗ್ಯವನ್ನು ನಿರಂತರವಾಗಿ ಗಮನಿಸಲು ಎನ್.ಐಸಿಯು ಘಟಕದಲ್ಲಿಟ್ಟು ಘೋಷಿಸಬೇಕಾಗುತ್ತದೆ.







9 ತಿಂಗಳು 7 ದಿನ ತಾಯಿಯ ಗರ್ಭದಲ್ಲೇ ಕಳೆದು ಹುಟ್ಟಿದ ಮಕ್ಕಳಲ್ಲಿ ಇಂತಹ ಯಾವುದೇ ಸಮಸ್ಯೆಗಳು ಹೆಚ್ಚಾಗಿ ಕಾಣಿಸದೇ ಇರುವ ಕಾರಣ ಅಂತಹ ಮಕ್ಕಳನ್ನು ಎನ್. ಐ.ಸಿ.ಯು ಘಟಕಕ್ಕೆ ಕರೆತರುವ ಅವಶ್ಯಕತೆ ಬರುವುದಿಲ್ಲ ನವಜಾತ ಶಿಶುವಿನಲ್ಲಿ ಕಂಡುಬರುವ ಆರೋಗ್ಯದ ಸಮಸ್ಯೆಗಳನ್ನು ಪರಿಹರಿಸಲು ಪರಿಹರಿಸಲೆಂದೇ 10 ಬೆಡ್‌ಗಳ ಎನ್‌ಐಸಿಯು ಘಟಕವನ್ನು ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಸ್ಥಾಪಿಸಲಾಗಿದೆ.

ಎನ್‌ಐಸಿಯು ಘಟಕದಲ್ಲಿ ನುರಿತ ಮಕ್ಕಳ ವೈದ್ಯರು, ಜೂನಿಯರ್ ಡಾಕ್ಟರ್‌ಗಳು ಪ್ಯಾರಾಮೆಡಿಕಲ್ ಹಾಗೂ ಡಿ ಗುಂಪಿನ ಸಿಬ್ಬಂದಿ ಸೇರಿದಂತೆ ಸುಮಾರು 30 ರಿಂದ 35 ವೈದ್ಯಕೀಯ ಸಿಬ್ಬಂದಿ ದಿನದ 24 ಗಂಟೆ ಕಾರ್ಯನಿರ್ವಹಿಸುತ್ತಾ ಶಿಶುಗಳ ಆರೈಕೆಯಲ್ಲಿ ತೊಡಗಿರುತ್ತಾರೆ .

### ಎನ್‌ಐಸಿಯು ಘಟಕದಲ್ಲಿ ಕ್ರಿಟಿಕಲ್ ಬೇಬಿ

ಯಾವ ರೀತಿಯ ಮಕ್ಕಳನ್ನು ತುರ್ತು ಚಿಕಿತ್ಸಾ ಘಟಕದಲ್ಲಿಡುತ್ತಾರೆ ಎಂದರೆ ಸಾಮಾನ್ಯವಾಗಿ ತೂಕ ಕಡಿಮೆಯಿರುವ ಅಂದರೆ 1.8 ಕೆಜಿಗಿಂತ ಕಡಿಮೆ ತೂಕದ ಅಥವಾ 34 ವಾರಕ್ಕೆ ಮೊದಲು ಹುಟ್ಟಿದಮಕ್ಕಳನ್ನು ಎನ್. ಐ. ಸಿ.ಯು ಘಟಕದಲ್ಲಿಟ್ಟು ಪಾಲನೆ ಪೋಷಣೆ ಮಾಡಬೇಕಾಗುತ್ತದೆ ತೀರಾ ಮಕ್ಕಳು ಚಿಕ್ಕದಾಗಿದ್ದರೆ ಅವರನ್ನು ಇನ್ ಕ್ಯೂಬೇಟರ್‌ನಲ್ಲಿಟ್ಟು ಹಾಗೂ ವಾರ್ಮರ್‌ನಲ್ಲಿಟ್ಟು ಆರೋಗ್ಯದ ಬಗ್ಗೆ 24ಗಂಟೆ ಕಾಲ ಗಮನ ಹರಿಸಬೇಕಾಗುತ್ತದೆ ಮತ್ತೆ ಎಲ್ಲಾ ಅಂತಹ ಮಕ್ಕಳಿಗೆ ರೀತಿಯ ಲೈಫ್ ಸಪೋರ್ಟ್ ನೀಡಬೇಕಾಗುತ್ತದೆ. ಉಸಿರಾಟದ ತೊಂದರೆ ಇರುವ ಮಕ್ಕಳನ್ನು ವೆಂಟಿಲೇಟರ್ ನಲ್ಲಿರಿಸಿ ಸತತ 24 ಗಂಟೆಗಳ ಕಾಲ ಪರಿಶೀಲಿಸಲಾಗುತ್ತದೆ. ಹುಟ್ಟಿದ ಸಂದರ್ಭದಲ್ಲಿ ಅಳದಿರುವ ಮತ್ತು ಹೃದಯಕ್ಕೆ ಸಂಬಂಧಪಟ್ಟ ತೊಂದರೆ ಇರುವಂತ ಶಿಶುಗಳನ್ನು ಎನ್‌ಐಸಿಯು ಘಟಕದಲ್ಲಿ ಇಟ್ಟು ಪಾಲನೆ ಘೋಷಣೆ ಮಾಡಿ ನಂತರ ತಾಯಿಯ ಮಡಿಲಿಗೆ ಸೇರಿಸಲಾಗುವುದು. ಯಾವ ಕೆಲಸಗಳನ್ನು ಸಾಮಾನ್ಯ ವಾರ್ಡಿನಲ್ಲಿ ಮಾಡಲು ಸಾಧ್ಯವಿಲ್ಲವೋ ಅದನ್ನು ಎನ್. ಐ. ಸಿಯು ಘಟಕದಲ್ಲಿ ಮಾಡಲಾಗುತ್ತದೆ. ಇಲ್ಲ ಕೆಲಸ ನಿರ್ವಹಿಸುವ ಸಿಬ್ಬಂದಿಗೆ ವಿಶೇಷ ತರಬೇತಿ ಪಡೆದಿರುತ್ತಾರೆ.

### ನವಜಾತ ಶಿಶು ಆರೈಕೆ ಕೇಂದ್ರ (ಎನ್.ಬಿ.ಸಿ.ಸಿ):

ಹೆರಿಗೆ ಕೊಠಡಿಯಲ್ಲಿ ಪ್ರತ್ಯೇಕ ಸ್ಥಳದಲ್ಲಿ ಮಗುವನ್ನು ಬೆಚ್ಚಗಿಡಲು ರೇಡಿಯಂಟ್ವಾರ್ಮರ್ಸ್ ಸೌಲಭ್ಯ ಒದಗಿಸಲಾಗಿದೆ. ಹಾಗೂ ಪ್ರಸವ



ಸಮಯದಲ್ಲಿ ಉಸಿರುಗಟ್ಟುವಿಕೆಯಾದಲ್ಲಿ ಚಿಕಿತ್ಸೆ ನೀಡಲು ಅಗತ್ಯ ರಿಸಾಸಿಟೇಷನ್ ಉಪಕರಣ ಹಾಗೂ ಆಕ್ಸಿಜನ್ ಸೌಲಭ್ಯವನ್ನು ನೀಡಲಾಗಿರುತ್ತದೆ. ಈ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುವ ವೈದ್ಯರು ಮತ್ತು ಶುಶ್ರೂಷಕರುಗಳಿಗೆ ನವಜಾತ ಶಿಶು ಸುರಕ್ಷಾ ಕಾರ್ಯಕ್ರಮದಡಿ ತರಬೇತಿ ನೀಡಿ ಸಜ್ಜುಗೊಳಿಸಲಾಗಿದೆ.

### ನವಜಾತ ಶಿಶು ಸ್ಥಿರಿಕರಣ ಘಟಕ (ಎನ್.ಬಿ.ಎಸ್.ಯು):

ರಾಜ್ಯದಲ್ಲಿ ಪ್ರಸ್ತುತ 165 ನವಜಾತ ಶಿಶು ಸ್ಥಿರೀಕರಣ ಘಟಕಗಳು (ಎನ್.ಬಿ.ಎಸ್. ಯು) ಕಾರ್ಯನಿರ್ವಹಿಸುತ್ತಿವೆ. ಜನನ ಸಮಯದಲ್ಲಿ ತೊಂದರೆಗೊಳಗಾಗುವ ನವಜಾತ ಶಿಶುಗಳಿಗೆ ಅಗತ್ಯ ತುರ್ತು ಚಿಕಿತ್ಸೆ ನೀಡಲಾಗುತ್ತಿದೆ. ಇದಲ್ಲದೇ ಶಿಶುವಿನಲ್ಲಿ ಕಾಣಿಸಿಕೊಳ್ಳುವ ಜಾಂಡೀಸ್ ಕಾಯಿಲೆಗೆ ಅಗತ್ಯದ ಫೋಟೋಥೆರಪಿ ಚಿಕಿತ್ಸೆ ನೀಡಲು ಉಪಕರಣಗಳನ್ನು ಒದಗಿಸಲಾಗಿದೆ. ಇದರ ಜೊತೆಗೆ ಮಕ್ಕಳಲ್ಲಿ ಕಂಡುಬರುವ ವಾಂತಿ, ಬೇಧಿ ಇತ್ಯಾದಿ ತೊಂದರೆಗಳಿಗೂ ಸಹ ಚಿಕಿತ್ಸೆ ನೀಡಲಾಗುವುದು.

### ನವಜಾತ ಶಿಶು ಆರೈಕೆ ಘಟಕಗಳಲ್ಲಿ ನೀಡುತ್ತಿರುವ ವಿಶೇಷ ಸೇವೆಗಳು:

- ಕಡಿಮೆ ಜನನ ತೂಕವುಳ್ಳ ಶಿಶುಗಳ ಆರೈಕೆ.
- ತಾಯಿ ಎದೆಹಾಲುಣಿಸಲು ಸಲಹೆ ನೀಡುವುದು.
- ರೋಗಗ್ರಸ್ತ ಶಿಶುಗಳ ಆರೈಕೆ.
- ಸಿ.ಪಿ.ಎ.ಪಿ. ಹಾಗೂ ವೆಂಟಿಲೇಟರ್ ಸೇವೆ.
- ಎಸ್.ಎನ್.ಸಿ.ಯುಗಳಿಂದ ಬಿಡುಗಡೆಯಾದ ಶಿಶುಗಳ ಆರೋಗ್ಯದ ಬಗ್ಗೆಸತತ ನಿಗಾವಹಿಸುವುದು
- ಲಸಿಕಾ ಸೇವೆ.
- ಅಗತ್ಯವಿದ್ದಲ್ಲಿ ಹೆಚ್ಚಿನ ಚಿಕಿತ್ಸೆಗೆ ನಿರ್ದೇಶಿಸುವುದು.

### ಕಾಂಗರೂ ಮದರ್ ಕೇರ್ ವಾರ್ಡ್:

ಕಡಿಮೆ ಹುಟ್ಟು ತೂಕವುಳ್ಳ ಶಿಶುಗಳಿಗೆ ಆರೈಕೆ ನೀಡಲು ವಿಶೇಷ ನವಜಾತ ಶಿಶು ಆರೈಕೆ ಘಟಕಗಳನ್ನುಹೊಂದಿರುವ ಎಲ್ಲಾ ಆಸ್ಪತ್ರೆಗಳಲ್ಲಿ ಕಾಂಗರೂ ಮದರ್ ಕೇರ್ ವಾರ್ಡಗಳನ್ನು ತೆರೆಯಲಾಗಿದೆ. ತರಬೇತಿ ಹೊಂದಿದ ಶುಶ್ರೂಷಕಿಯರುಗಳನ್ನು ನೇಮಿಸಿ ಆರೈಕೆ ಮಾಡುವುದರಿಂದ ಶಿಶುಗಳ ತೂಕವನ್ನು ಸಹಜವಾಗಿ ಹೆಚ್ಚಿಸಲಾಗುತ್ತದೆ.

ಇಲ್ಲಿ ತಾಯಿ ಎದೆಮೇಲೆ ಮಕ್ಕಳನ್ನು7–8ಗಂಟೆ ಕಾಲ ಮಲಗಿಸುವ ಮೂಲಕ ತಾಯಿಯ ಸಹಜ ಅಪ್ಪುಗೆಯಿಂದ ನವಜಾತ ಶಿಶುಗಳ ಆರೋಗ್ಯದಲ್ಲಿ ಗುಣಾತ್ಮಕ ಬದಲಾವಣೆ ಕಾಣಿಸಿಕೊಂಡು ಇದು ಮಗುವಿನ ತೂಕ ಹೆಚ್ಚಾಗಲು ಕಾರಣವಾಗಲಿದೆ.

## ಡಾ. ಸಿ.ಪಿ. ಚಂದ್ರಪ್ಪ ಅನುಭವ ಮಾತು

ಶ್ರೀದೇವಿ ವೈದ್ಯಕೀಯ ಕಾಲೇಜಿನ ಎನ್. ಐ.ಸಿಯು ಘಟಕದಲ್ಲಿ ಕೆಲಸ ಮಾಡುವ ಸಿಬ್ಬಂದಿ ಮಾನವೀಯತೆ ಬಗ್ಗೆ ಎಷ್ಟು ಹೇಳಿದರು ಸಾಲದು. ಡಾಕ್ಟರ್ ಚಂದ್ರಪ್ಪ ಕಳೆದ 20 ವರ್ಷಗಳಿಂದಲೂ ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿದ್ದಾರೆ



ಅವರ ಪತ್ನಿಗೆ ಅವಳಿ ಮಗು ಜನಿಸಿದ ಸಂದರ್ಭದಲ್ಲಿ ಚಂದ್ರಪ್ಪ ಊರಿನಲ್ಲಿ ಇರಲಿಲ್ಲ ಆ ಸಂದರ್ಭದಲ್ಲಿ ಹುಟ್ಟಿದ ಮಕ್ಕಳ ತೂಕ ಒಂದು ಕೆಜಿಗಿಂತಲೂ ಕಡಿಮೆ ಇದ್ದಕಾರಣ ಮಕ್ಕಳನ್ನು ಎನ್‌ಐಸಿಯು ಘಟಕದಲ್ಲಿ ಇಟ್ಟು ಪಾಲನೆ–ಪೋಷಣೆ ಮಾಡಬೇಕಾಗಿತ್ತು. ಸುಮಾರು 5–6 ತಿಂಗಳು ಮಕ್ಕಳನ್ನು ಎನ್‌ಐಸಿಯು ಘಟಕದಲ್ಲಿಟ್ಟು ಅಲ್ಲಿನ ಸಿಬ್ಬಂದಿ ಜತನದಿಂದ ಕಾಪಾಡಿದ್ದಾರೆ. ಅದರಲ್ಲೂ ವಿಶೇಷವಾಗಿ ರೇಖಾಗುರುಮೂರ್ತಿಮತ್ತು ಸಿಬ್ಬಂದಿ ತೋರಿದಕಾಳಜಿಯನ್ನು ಪದೆಪದೇ ಸ್ಮರಿಸಿಕೊಳ್ಳುತ್ತಿದ್ದಾರೆ ಇಂದು ಇಬ್ಬರು ಮಕ್ಕಳು ಆರೋಗ್ಯವಾಗಿದ್ದಾರೆ.ಸದ್ಯ 2 ವರ್ಷ ಪೂರ್ಣಗೊಳಿಸಿದ್ದಾರೆ.

ಚಂದ್ರಪ್ಪ ಮೂಲ ಆಂಧ್ರಪ್ರದೇಶದ ಹಿಂದೂಪುರ. ಹುಟ್ಟೂರಿನಲ್ಲೆ ಬಿಎಸ್ಸಿ ಪದವಿ ಮುಗಿಸಿ ತದನಂತರ ಬೆಂಗಳೂರಿನಲ್ಲಿ ಎಂಎಸ್ಸಿ ಬಯೋಟೆಕ್ನಾಲಜಿಯಲ್ಲಿ ಪಿಎಚ್. ಡಿ. ಪದವಿಗಳಿಸಿದ್ದಾರೆ. ನನ್ನ ವೃತ್ತಿ ಹಾಗೂ ಕೌಟುಂಬಿಕ ಬೆಳವಣಿಗೆಯಲ್ಲಿ ಶ್ರೀದೇವಿ ವೈದ್ಯಕೀಯ ಕಾಲೇಜುವಹಿಸಿದ ಪಾತ್ರದ ಬಗ್ಗೆ ಹೆಮ್ಮೆಯಿದೆ. ಗೌರವವಿದೆ. ವಿಶೇಷವಾಗಿ ಎಲ್ಲ ಸಮಯದಲ್ಲೂ ಬೆನ್ನುತಟ್ಟಿ ಪ್ರೋತ್ಸಾಹ ನೀಡಿ ಈ ಮಟ್ಟಕ್ಕೆ ಬೆಳೆಯಲು ಕಾರಣರಾದ ಸಂಸ್ಥೆಯ ಅಧ್ಯಕ್ಷ ಡಾ. ಎಂ. ಆರ್. ಹುಲಿ ನಾಯ್ಕರ್ ಮತ್ತು ವೈದ್ಯಕೀಯ ನಿರ್ದೇಶಕ ಡಾ. ರಮಣ್ ಹುಲಿನಾಯ್ಕರ್ ಮತ್ತು ಕಾಲೇಜು ಸಿಬ್ಬಂದಿ ಸಹಕಾರ ಮತ್ತು ನಿರಂತರ ಪ್ರೋತ್ಸಾಹವನ್ನು ಚಂದ್ರಪ್ಪ ಸದಾ ವಿನೀತ ಭಾವದಿಂದ ಸ್ಮರಿಸುತ್ತಾರೆ.

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**